# ಖ಼ಿಲಾಫತ್

# ಶಾಂತಿ

# ನ್ಯಾಯಪಾಲನೆ



ಲಂಡನಿನ ಹನ್ನೊಂದನೇ ರಾಷ್ಟ್ರೀಯ ಶಾಂತಿ ಸಂಕಿರಣದಲ್ಲಿ ಮಾಡಲಾದ ಮುಖ್ಯ ಭಾಷಣ.


ಹಝ಼್ರತ್ ಮಿರ್ಝಾ಼ ಮಸ್‌ರೂರ್ ಅಹ್ಮದ್ (ಅಯ್ಯದಹುಲ್ಲಾಹ್)

ಖ಼ಲೀಫತುಲ್ ಮಸೀಹ್ V

ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಜಾಗತಿಕ ಸರ್ವೋನ್ನತ ನೇತಾರ







## ಪ್ರಸ್ತಾವನೆ

2014 ನವೆಂಬರ್ 8ರಂದು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋಚ್ಚ ನೇತಾರ, ಐದನೇ ಖ಼ಲೀಫ ಹಝ್ರತ್ ಮಿರ್ಝಾ಼ ಮಸ್‌ರೂರ್ ಅಹ್ಮದ್, ಹನ್ನೊಂದನೇ ನ್ಯಾಷನಲ್ ಶಾಂತಿ ಸಂಕಿರಣದಲ್ಲಿ  ಮುಖ್ಯ ಭಾಷಣವನ್ನು ಮಾಡಿದರು. ಅವರು ತಮ್ಮ ಭಾಷಣದಲ್ಲಿ ಐಸಿಸ್ ಮತ್ತು ಇತರ ಭಯೋತ್ಪಾದಕ ಗುಂಪುಗಳ ಕಾರ್ಯಾಚರಣೆಯನ್ನು ಸಂಪೂರ್ಣವಾಗಿ ಅನಿಸ್ಲಾಮಿಕವೆಂದು ಹೇಳಿ ಸ್ಪಷ್ಟವಾಗಿ ಖಂಡಿಸಿದರು. ಈ ಗುಂಪುಗಳು ಅನೈತಿಕವಾಗಿ ಭಯೋತ್ಪಾದನೆಯ ಜಾಲವನ್ನು ಹರಡುತ್ತಿದ್ದಾರೆ ಎಂದು ಸಹ ಹೇಳಿದರು. ಸಮಾಜದ ಎಲ್ಲ ಮಟ್ಟದಲ್ಲಿ ಸಹನೆ, ಪರಸ್ಪರ ಗೌರವ ಮತ್ತು ಸಹಾನುಭೂತಿಯನ್ನು ಪ್ರೋತ್ಸಾಹಿಸುವ ಶಾಂತಿಯ ಧರ್ಮವಾಗಿದೆ ಇಸ್ಲಾಮ್ ಎಂದು ಪವಿತ್ರ ಖುರ್‌ಆನಿನ ಅನೇಕ ವಚನಗಳನ್ನು ಉಲ್ಲೇಖಿಸಿ ಹಝ್ರತ್ ಖ಼ಲೀಫರು ಸಾಬೀತುಗೊಳಿಸಿದರು. ಐಸಿಸ್‌ನಂತಹ ಭಯೋತ್ಪಾದಕ ಗುಂಪುಗಳಿಗೆ ನೆರವು ಮತ್ತು ಧನಪೂರೈಕೆ ಹೇಗೆ ಆಗುತ್ತದೆ ಎಂದು ಹಝ್ರತ್ ಖ಼ಲೀಫರು ಕೇಳಿದರು. ಬೈತುಲ್ ಫುತೂಹ್ ಮಸೀದಿಯಲ್ಲಿ ಸಂಘಟಿಸಲಾದ ಈ ಕಾರ್ಯಕ್ರಮದಲ್ಲಿ ಸಾವಿರಕ್ಕೂ ಮೇಲ್ಪಟ್ಟು ಸಭಿಕರು ಉಪಸ್ಥಿತರಿದ್ದರು. ಸರ್ಕಾರಿ ಮಂತ್ರಿಗಳು, ರಾಯಭಾರಿಗಳು, ಪಾರ್ಲಿಮೆಂಟ್ ಸದಸ್ಯರು, ಪ್ರತಿಷ್ಠಿತರು ಮತ್ತು ಅತಿಥಿಗಳನ್ನು ಒಳಗೊಂಡ ಅಹ್ಮದಿಯೇತರಾದ 550ಕ್ಕಿಂತ ಹೆಚ್ಚು ಮಂದಿ ಸಂಕಿರಣದಲ್ಲಿ ಭಾಗವಹಿಸಿದರು. ಈ ವರ್ಷದ ಶಾಂತಿ ಸಂಕಿರಣದ ವಿಷಯ "ಖಿ಼ಲಾಫತ್, ಶಾಂತಿ ಮತ್ತು ನ್ಯಾಯ" ಎಂದಾಗಿತ್ತು. ಸಂಕಿರಣದಲ್ಲಿ ಅಭಿವೃದ್ಧಿಶೀಲ ದೇಶಗಳ ಬಡಮಕ್ಕಳಿಗೆ ಶಿಕ್ಷಣ ಮತ್ತು ಆಹಾರ ಪೂರೈಸುವ ಗಮನಾರ್ಹ ಪರಿಶ್ರಮಕ್ಕೆ ಮನ್ನಣೆ ನೀಡುತ್ತಾ ಹಝ್ರತ್ ಖ಼ಲೀಫತುಲ್ ಮಸೀಹರು "ಮೇರೀಸ್ ಮೀಲ್"ನ (Mary's Meals UK) CEO ಆದ "ಮ್ಯಾಗ್ನಸ್ ಮ್ಯಾಕ್‌ಫರ್‌ಲೇನ್ ಬೇರೋ" ಅವರಿಗೆ (Magnus MacFarlane-Barrow) ಅಹ್ಮದಿಯಾ ಮುಸ್ಲಿಮ್ ಪ್ರೈಝ್ ಫಾರ್ ದಿ ಅಡ್ವಾನ್ಸ್‌ಮೆಂಟ್ ಆಫ್ ಪೀಸ್ ನೀಡಿ ಸನ್ಮಾನಿಸಿದರು. ಖ಼ಲೀಫತುಲ್ ಮಸೀಹರ ಮುಖ್ಯ ಭಾಷಣಕ್ಕೆ ಮುಂಚೆ ರಫೀಕ್ ಹಯಾತ್ (ಅಹ್ಮದಿಯಾ ಮುಸ್ಲಿಮ್ ಕಮ್ಯುನಿಟಿ ಯು.ಕೆ.ಯ ನ್ಯಾಶನಲ್ ಪ್ರೆಸಿಡೆಂಟ್), ಲಾರ್ಡ್ ತಾರಿಖ್ ಅಹ್ಮದ್ ಆಫ್ ವಿಂಬಲ್ಡನ್ (ಮಿನಿಸ್ಟರ್ ಫಾರ್ ಕಮ್ಯೂನಿಟೀಸ್), ಸಿಯೋಭನ್ ಮ್ಯಾಕ್‌ಡೋನಾಘ್ (ಎಂ.ಪಿ., ಆಲ್ ಪಾರ್ಟಿ ಪಾರ್ಲಿಮೆಂಟರಿ ಗ್ರೂಪ್ ಫಾರ್ ದ ಅಹ್ಮದಿಯಾ ಮುಸ್ಲಿಮ್ ಕಮ್ಯುನಿಟಿಯ ಸಭಾಧ್ಯಕ್ಷೆ), ರೈಟ್ ಹಾನರೇಬಲ್ ಎಡ್ ಡೇವಿ (ಎಂ.ಪಿ., ಸೆಕ್ರಟರಿ ಆಫ್ ಸ್ಟೇಟ್ ಫಾರ್ ಎನರ್ಜಿ ಆ್ಯಂಡ್ ಕ್ಲೈಮಟ್ ಚೇಂಜ್), ರೈಟ್ ಹಾನರೇಬಲ್ ಜಸ್ಟಿನ್ ಗ್ರೀನಿಂಗ್ (ಎಂ.ಪಿ., ಸೆಕ್ರಟರಿ ಆಫ್ ಸ್ಟೇಟ್ ಫಾರ್ ಇಂಟರ್‌ನ್ಯಾಷನಲ್ ಡೆವಲಪ್‌ಮೆಂಟ್) ಹ್ರಸ್ವ ಭಾಷಣಗಳನ್ನು ಮಾಡಿದರು. ರೆವರಂಡ್ ಕೆವಿನ್ ಮ್ಯಾಕ್‌ಡೋನಾಲ್ಡ್ (ನಿವೃತ್ತ ಆರ್ಚ್ ಬಿಶಪ್ ಎಮೆರಿಟಸ್ ಆಫ್ ಸೌತ್‌ವಾರ್ಕ್) ಅವರು ವ್ಯಾಟಿಕನ್‌ನಿಂದ ಕಳುಹಿಸಲಾದ ವಿಶೇಷ ಸಂದೇಶವನ್ನು ಓದಿದರು.

**8 ನವೆಂಬರ್, 2014ರಂದು ಲಂಡನಿನಲ್ಲಿ ಆಯೋಜಿಸಲಾದ ಹನ್ನೊಂದನೇ ರಾಷ್ಟ್ರೀಯ ಶಾಂತಿ ಸಂಕಿರಣದಲ್ಲಿ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಜಾಗತಿಕ ಸರ್ವೋನ್ನತ ನೇತಾರರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್(ಅಯ್ಯದಹುಲ್ಲಾಹ್) ಮಾಡಿದ ಮುಖ್ಯ ಭಾಷಣ.**

ಸಾಂಪ್ರದಾಯಿಕ ಪ್ರಾರ್ಥನೆಗಳನ್ನು ಮಾಡಿದ ನಂತರ ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್(ಅಯ್ಯದಹುಲ್ಲಾಹ್) ಖ಼ಲೀಫತುಲ್ ಮಸೀಹ್ V ಹೀಗೆ ಹೇಳಿದರು:

ಎಲ್ಲ ಗಣ್ಯ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹು (ಅಲ್ಲಾಹನ ಶಾಂತಿ ಮತ್ತು ಅನುಗ್ರಹ ನಿಮ್ಮೆಲ್ಲರ ಮೇಲೆ ಇರಲಿ).

ಈ ವರ್ಷದ ಪೀಸ್ ಸಿಂಪೋಸಿಯಮ್‌ಗೆ ನೀವೆಲ್ಲರೂ ಆಗಮಿಸಿದುದಕ್ಕೋಸ್ಕರ ನಿಮಗೆ ನಾನು ಮೊದಲನೆಯದಾಗಿ ಕೃತಜ್ಞತೆ ಅರ್ಪಿಸುತ್ತೇನೆ. ನಿಮ್ಮ ಪೈಕಿ ಅನೇಕರಿಗೆ ತಿಳಿದಿರುವ ಹಾಗೆ ಕಳೆದ ಒಂದು ದಶಕದಲ್ಲಿ ಪ್ರತಿವರ್ಷ ಈ ಪೀಸ್ ಸಿಂಪೋಸಿಯಮ್ ಜರಗಿಸುವುದು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ವಾರ್ಷಿಕ ಕಾರ್ಯಕ್ರಮಗಳ ಒಂದು ಸ್ಥಿರವಾದ ಭಾಗವಾಗಿದೆ. ಸಾಮಾನ್ಯವಾಗಿ ಮಾರ್ಚ್ ತಿಂಗಳಲ್ಲಿ ಇದನ್ನು ನಡೆಸಲಾಗುತ್ತಿದೆಯಾದರೂ ಈ ವರ್ಷ ವಿವಿಧ ಕಾರಣಗಳಿಂದ ನವೆಂಬರ್‌ನಲ್ಲಿ ನಡೆಸಲಾಗುತ್ತಿದೆ. ಈ ದಿನ ನ್ಯಾಷನಲ್ ರಿಮೆಂಬರೆನ್ಸ್ ದಿನಾಚರಣೆ ನಡೆಸಲಾಗುತ್ತಿದೆಯಾದ ಕಾರಣ ನಾವು ಆಮಂತ್ರಿಸಿದ ಅನೇಕ ಅತಿಥಿಗಳಿಗೆ ನಮ್ಮ ಸಮಾರಂಭದಲ್ಲಿ ಭಾಗವಹಿಸಲು ಸಾಧ್ಯವಾಗದಿರಬಹುದು.

ಇಲ್ಲಿಗೆ ಆಗಮಿಸಿದ ನಿಮಗೆಲ್ಲರಿಗೂ ಧನ್ಯವಾದ ಅರ್ಪಿಸುತ್ತೇನೆ. ಒಂದು ಮುಸ್ಲಿಮ್ ಪಂಗಡ ಶಾಂತಿಯ ಬಗ್ಗೆ ಏನು ಹೇಳುತ್ತಿದೆ ಎಂದು ತಿಳಿಯಲು ನೀವು ಬಯಸುತ್ತೀರೆಂದು



ನೀವು ಇಲ್ಲಿಗೆ ಬಂದು ಉಪಸ್ಥಿತರಾಗಿರುವುದು ಸಾಬೀತುಗೊಳಿಸುತ್ತಿದೆ. ಇಂದಿನ ಕಾಲದಲ್ಲಿ ವಿಶ್ವಶಾಂತಿಯ ಬಗ್ಗೆ ಮತ್ತು ಲೋಕದಲ್ಲಿ ತಲೆದೋರಿರುವ ಸಂಘರ್ಷಗಳ ಬಗ್ಗೆ ಬಹಳ ಚರ್ಚೆ ನಡೆಯುತ್ತಿದೆ.

ಲೋಕದ ಇಂದಿನ ಪರಿಸ್ಥಿತಿ ಭಯಾನಕವೂ ಆತಂಕದಾಯಕವೂ ಆಗಿದೆ. ಇಂದು ತಲೆದೋರಿರುವ ಅಸ್ತವ್ಯಸ್ತತೆಗೆ ಕಾರಣ ಕೆಲವು ಮುಸ್ಲಿಮ್ ನಾಮಧಾರಿಗಳ ಕೃತ್ಯಗಳು ಎಂಬುದು ದುಃಖಕರವಾದರೂ ನಾನು ಅದನ್ನು ಹೇಳಲು ಹಿಂಜರಿಯುವುದಿಲ್ಲ. ತನ್ನ ಧರ್ಮ ತತ್ವಗಳನ್ನು ಮನವರಿಕೆ ಮಾಡಿಕೊಂಡ ಪ್ರತಿಯೊಬ್ಬ ಶಾಂತಿಪ್ರಿಯನಾದ ಮುಸ್ಲಿಮನಿಗೆ ಇದು ಬಹಳ ದುಃಖಕರವೂ ನಿರಾಶಾದಾಯಕವೂ ಆದ ಸಂಗತಿಯಾಗಿದೆ. ಕಳೆದ ಒಂದು ವರ್ಷದಲ್ಲಿ ಒಂದು ಗುಂಪು ತನ್ನ ಭೀಕರ ಕೃತ್ಯಗಳ ನಿಷ್ಕರುಣ ಶೃಂಖಲೆಯನ್ನು ಜಾರಿಗೊಳಿಸಿರುವುದರಿಂದ ಲೋಕದಲ್ಲಿ ಬಹಳ ಹೆಚ್ಚು ಆತಂಕದ ವಾತಾವರಣ ಸೃಷ್ಟಿಯಾಗಿದೆ. ನಾನು ಪ್ರಸ್ತಾಪಿಸುತ್ತಿರುವುದು ISIS (ಇಸ್ಲಾಮಿಕ್ ಸ್ಟೇಟ್ ಆಫ್ ಇರಾಕ್ ಆ್ಯಂಡ್ ಸಿರಿಯಾ) ಅಥವಾ IS ಎಂದು ಸಾಮಾನ್ಯವಾಗಿ ಪ್ರಸಿದ್ಧವಾಗಿರುವ ಗುಂಪಿನ ಬಗ್ಗೆಯಾಗಿದೆ.

ಈ ಭೀಕರವಾದಿ ಗುಂಪಿನ ಕೃತ್ಯಗಳು ಮುಸ್ಲಿಮ್ ದೇಶಗಳ ಮೇಲೆ ಮಾತ್ರವಲ್ಲ, ಯುರೋಪಿನ ದೇಶಗಳ ಮೇಲೆಯೂ ಇತರ ದೇಶಗಳ ಮೇಲೆಯೂ ಬಲವಾದ ಪರಿಣಾಮ ಬೀರಿದೆ ಮತ್ತು ಅದರ ಬರ್ಬರ ಕೃತ್ಯಗಳಿಂದ ಬಾಧಿತವಾಗಿವೆ. ವ್ಯಾಕುಲಪಡಿಸುವಷ್ಟು ಸಂಖ್ಯೆಯಲ್ಲಿ ಯುರೋಪಿನಿಂದಲೂ ಇತರ ದೇಶಗಳಿಂದಲೂ ಮುಸ್ಲಿಮ್ ಯುವಜನರು, ಇಸ್ಲಾಮ್ ಧರ್ಮದ ನೈಜ ಚಿತ್ರವನ್ನು ಐಸಿಸ್ ಪ್ರತಿನಿಧಿಸುತ್ತದೆ ಎಂದು ಹೇಗೆಯೋ ನಂಬಿಕೊಂಡು ಅದರ ಸಿದ್ಧಾಂತವನ್ನು ಬೆಂಬಲಿಸುತ್ತಿದ್ದಾರೆ. ಈ ಕಾರಣದಿಂದ ಈ ಯುವ ಜನರು ಐಸಿಸ್‌ಗೆ ಸಹಾಯ ನೀಡಲು ಮತ್ತು ಅವರಿಗೋಸ್ಕರ ಹೋರಾಡಲು ಸಹ ನಿರ್ಧರಿಸಿದ್ದಾರೆ.


ಭೀಕರವಾದಿಗಳಾದ ಐಸಿಸ್ ತಪ್ಪಾಗಿ ಇಸ್ಲಾಮ್ ಹೆಸರಿನಲ್ಲಿ ಮಾಡುತ್ತಿರುವ ಯುದ್ಧಗಳಲ್ಲಿ ಭಾಗವಹಿಸಲು ಬಹುತೇಕ ಯುವ ಮುಸ್ಲಿಮರನ್ನು ಒಳಗೊಂಡಿರುವ ಅಂದಾಜು ಐನೂರು



ಜನರು ಯು.ಕೆ.ಯಿಂದ ಸಿರಿಯಾ ಮತ್ತು ಇರಾಖ್‌ಗೆ ಹೋಗಿದ್ದಾರೆಂದು ತಿಳಿದುಬಂದಿದೆ. ಈ ತಥಾಕಥಿತ 'ಜಿಹಾದ್'ನಲ್ಲಿ ಹೋರಾಡಲು ಯುರೋಪಿನಿಂದ ಹೋದ ಮುಸ್ಲಿಮರ ಸಂಖ್ಯೆಯನ್ನು ವೀಕ್ಷಿಸುವುದಾದರೆ, ಜರ್ಮನಿ ಮತ್ತು ಇತರ ಯುರೋಪಿಯನ್ ದೇಶಗಳಿಂದ ಇರಾಕ್ ಮತ್ತು ಸಿರಿಯಾ ದೇಶಗಳಿಗೆ ಹೋದ ಮುಸ್ಲಿಮರ ಪ್ರಮಾಣಕ್ಕಿಂತ ಯು.ಕೆ.ಯಿಂದ ಹೋದವರ ಪ್ರಮಾಣ ಹೆಚ್ಚಿಗೆ ಇದೆ.

ಇದು ಯುನೈಟೆಡ್ ಕಿಂಗ್‌ಡಮ್‌ಗೆ ಅತ್ಯಂತ ಬೆದರಿಕೆ ಒಡ್ಡುವುದಾಗಿದೆ. ಏಕೆಂದರೆ ಐಸಿಸ್ ಮತ್ತು ಅದರ ತಥಾಕಥಿತ ಖಲೀಫರ ಕಾರ್ಯಸೂಚಿ ಮತ್ತು ಉದ್ದೇಶ ಲಕ್ಷ್ಯ ಅತ್ಯಂತ ಭೀಕರವೂ ಬರ್ಬರವೂ ಆಗಿದೆ.

ಅವರ ಖಲೀಫ ಪ್ರತೀಕಾರ ಮಾಡಲು ಬಯಸುವುದಾಗಿ ಮತ್ತು ದೇಶಗಳನ್ನು ಜಯಿಸಿ ಸ್ವಾಧೀನಪಡಿಸಲು ಇಚ್ಛಿಸುವುದಾಗಿ ವರದಿಯಾಗಿದೆ. ಮುಸ್ಲಿಮರನ್ನು ಲೋಕದ ಒಡೆಯರನ್ನಾಗಿ ಮಾಡಲು ಮತ್ತು ಎಲ್ಲ ಮುಸ್ಲಿಮೇತರರನ್ನು ಗುಲಾಮರನ್ನಾಗಿ ಪರಿವರ್ತಿಸಿ ಮುಸ್ಲಿಮರ 'ಸ್ವತ್ತ'ನ್ನಾಗಿ ಮಾಡಲು ಖಲೀಫ ಬಯಸುತ್ತಾರೆಂದು ವರದಿಯಾಗಿದೆ. ಮುಸ್ಲಿಮನಿಗೆ ನೋವನ್ನುಂಟು ಮಾಡುವವನನ್ನು ಶಿಕ್ಷಿಸಬೇಕೆಂದೂ ಶರೀಅತ್ ನಿಯಮಗಳು ಪ್ರತಿಯೊಂದು ದೇಶದ




ಪ್ರತಿಯೊಬ್ಬನಿಗೆ ಅನ್ವಯಿಸಬೇಕೆಂದೂ ಅವರು ಹೇಳುತ್ತಾರೆ. ಅನ್ಯ ಧರ್ಮದವರ ಮತ್ತು ಅನ್ಯ ಪಂಗಡಗಳ ಮಹಿಳೆಯರ ಹಕ್ಕುಗಳನ್ನು ಕಿತ್ತುಕೊಂಡು ಅವರನ್ನು ಸ್ವಾಧೀನಪಡಿಸಿ ಉಪಪತ್ನಿಯರನ್ನಾಗಿ ಅಥವಾ ಪತ್ನಿಯರನ್ನಾಗಿ ಮಾಡಲು ಬಲಾತ್ಕಾರ ಪ್ರಯೋಗಿಸಲು ಬಯಸುತ್ತಾರೆ. ಐಸಿಸ್ ತನ್ನ ಸಿದ್ಧಾಂತಕ್ಕೆ ವಿರೋಧವಾಗಿರುವ ಪ್ರತಿಯೊಂದು ಧರ್ಮ ಮತ್ತು ಪಂಗಡವನ್ನು ನಾಶಮಾಡಲು ಬಯಸುತ್ತದೆ. ಇಂದಿನ ಮುಸ್ಲಿಮ್ ಸರಕಾರಗಳ ಅಧಿಕಾರಗಳನ್ನು ಕಿತ್ತುಕೊಂಡು ಅವುಗಳನ್ನು ನಿರ್ಮೂಲ ಮಾಡಲು ಅದು ಬಯಸುತ್ತದೆ. ಇದು ಸತ್ಯವಾಗಿದ್ದರೆ ಅವರ ಕಾರ್ಯತಂತ್ರ ಮತ್ತು ಧ್ಯೇಯ ವಿಶಾಲವಾಗಿದ್ದು ಅವರ ಮುಖ್ಯೋದ್ದೇಶ ಲೋಕದಲ್ಲಿ ಶಾಂತಿಯನ್ನು ಕೆಡಿಸುವುದಾಗಿದೆ.

ಐಸಿಸ್ ಅಥವಾ ಬೇರೆ ಯಾವುದೇ ಉಗ್ರವಾದಿ ಗುಂಪು ಕೊನೆಗೆ ಜಯಶಾಲಿಯಾಗಿ ಲೋಕವನ್ನು ಸ್ವಾಧೀನಪಡಿಸುವುದು ಎಂದು ಸೂಚಿಸುವುದು ಅಸಂಬದ್ಧವಾಗಿದೆ. ಏಕೆಂದರೆ ಅದರ ಯೋಜನೆಗಳು ಸಂಪೂರ್ಣವಾಗಿ ಬುದ್ಧಿಹೀನವಾಗಿದೆ ಮತ್ತು ಪೊಳ್ಳು ವಿಚಾರವಾಗಿದೆ; ವಾಸ್ತವಿಕವಾದುದೇನೂ ಅಲ್ಲ. ಆದರೆ ಅವರನ್ನು ಅವರ ದಾರಿಯಲ್ಲಿ ಈಗಲೇ ತಡೆಯದಿದ್ದರೆ

ಅವರು ಸ್ವಯಂ ನಾಶಹೊಂದುವ ಮೊದಲು ಬಹಳ ವಿನಾಶ ಉಂಟುಮಾಡುವ ಸಾಧ್ಯತೆಗಳಿವೆ.

ಯಾವುದೇ ಸಹಾಯವಿಲ್ಲದೆ ಏಕವ್ಯಕ್ತಿ ಮಾಡುವ ಭೀಕರ ಮತ್ತು ಘೋರ ಕೃತ್ಯಗಳಿಂದ ಉಂಟಾದ ಅನೇಕ ಅನಾಹುತಗಳನ್ನು ನಾವು ಕಂಡಿದ್ದೇವೆ. ಅಮೇರಿಕದಲ್ಲಿ (ಯು.ಎಸ್.ಎ) ಕೆಲವು ತಿಂಗಳುಗಳ ಅಂತರದಲ್ಲಿ ಶಾಲೆಯಲ್ಲಿ ಗುಂಡು ಹೊಡೆತದ ವರದಿಗಳು ಬರುತ್ತಿವೆ. ಒಬ್ಬನೇ ಒಬ್ಬ ವ್ಯಕ್ತಿಯ ನೀಚ ಕೃತ್ಯದ ಕಾರಣದಿಂದ ಡಜನ್‌ಗಟ್ಟಲೆ ನಿಷ್ಕಳಂಕ ವಿದ್ಯಾರ್ಥಿಗಳು ಕೊಲ್ಲಲ್ಪಡುತ್ತಾರೆ. ಹೀಗಿರುವಾಗ ನಿರಾಶೆಗೊಂಡ ದುಗುಡ ಮನೋಭಾವದ ಮತ್ತು ಅನ್ಯಾಯಭರಿತ ಉದ್ದೇಶಕ್ಕಾಗಿ ಜೀವತೆರಲು ಸಿದ್ಧರಾದ ಜನರನ್ನು ಲೋಕದ ಎಲ್ಲ ಭಾಗಗಳಿಂದಲೂ ಭಯೋತ್ಪಾದಕ ಗುಂಪುಗಳು ಜಮಾಯಿಸುತ್ತಾ ಇರುವಾಗ ಅವರು ಎಷ್ಟು ಹಾನಿ ಉಂಟುಮಾಡಬಹುದು ಎಂದು ಯೋಚಿಸಿರಿ. ಏನು ಬೇಕಾದರೂ ಮಾಡಲಿಕ್ಕೆ ತಯಾರಿರುವ ಸದಸ್ಯರನ್ನು ಮಾತ್ರವಲ್ಲ, ಆಧುನಿಕ ಯದ್ಧೋಪಕರಣಗಳನ್ನು ಈ ಭೀಕರವಾದಿ ಸಂಘಟನೆ ಹೊಂದಿದೆ ಎಂಬ ಸಂಗತಿ ಅನಾಹುತಗಳ ಸಾಧ್ಯತೆಗಳನ್ನು ಹೆಚ್ಚಿಸಿವೆ. ಅವರು ಕೊನೆಗೆ ಅಣ್ವಸ್ತ್ರಗಳ ಮೇಲೆ ಕೈಹಾಕಬಹುದೆಂಬುದು ಅಸಾಧ್ಯವಾದುದೇನೂ ಅಲ್ಲ. ನಾನು ಇದರ ಮೊದಲು ಹೇಳಿದ ಹಾಗೆ ಇಂತಹ ಅಸ್ತವ್ಯಸ್ತಗೊಂಡ ಗುಂಪುಗಳು ದೀರ್ಘಕಾಲದ ಜಯ ಗಳಿಸದು. ಆದರೆ ಅದು ಅಲ್ಪಾವಧಿಯ ಕೆಲವು ಪ್ರದೇಶಗಳನ್ನು ಸ್ವಾಧೀನಪಡಿಸಿ ಬೃಹತ್ ಪ್ರಮಾಣದಲ್ಲಿ ನಾಶವನ್ನು ಉಂಟುಮಾಡಬಹುದು. ಇವುಗಳನ್ನೆಲ್ಲ ಗಮನಿಸುವಾಗ ಐಸಿಸ್ ಮತ್ತು ಅಂತಹ ಸಿದ್ಧಾಂತವನ್ನು ಹೊಂದಿದ ಇತರ ಗುಂಪುಗಳು ಲೋಕಕ್ಕೆ ಭೀಕರ ಬೆದರಿಕೆ ಒಡ್ಡುತ್ತದೆ ಎನ್ನುವುದರ ಬಗ್ಗೆ ಸಂಶಯವಿಲ್ಲ.



ಯಾರ ವಿರುದ್ಧ ಯುದ್ಧ ಹೂಡಲಾಗಿದೆಯೋ ಅವರಿಗೆ (ಪ್ರತಿಯುದ್ಧ ಮಾಡುವ) ಅನುಮತಿ ಇದೆ; ಏಕೆಂದರೆ ಅವರು ಆಕ್ರಮಣಕ್ಕೊಳಗಾಗಿದ್ದಾರೆ. ನಿಶ್ಚಯವಾಗಿಯೂ ಅವರಿಗೆ ಸಹಾಯ ನೀಡಲು ಅಲ್ಲಾಹನಿಗೆ ಸಾಮರ್ಥ್ಯವಿದೆ. – 'ಅಲ್ಲಾಹನೇ ನಮ್ಮ ಪ್ರಭು' ಎಂದು ಹೇಳಿದ ಮಾತ್ರಕ್ಕೆ ಅವರನ್ನು ಅನ್ಯಾಯವಾಗಿ ಅವರ ಮನೆಗಳಿಂದ ಹೊರಗೆ ಅಟ್ಟಲಾಯಿತು. ಅಲ್ಲಾಹನು ಜನರಲ್ಲಿ ಕೆಲವರನ್ನು (ಅವರು ಎಸಗುವ ದೌರ್ಜನ್ಯಗಳನ್ನು) ಬೇರೆ ಕೆಲವರ ಮೂಲಕ ತಡೆಯದಿರುತ್ತಿದ್ದರೆ ಸನ್ಯಾಸಿ ಮಠಗಳೂ ಇಗರ್ಜಿಗಳೂ ಯಹೂದಿ ಮಂದಿರಗಳೂ ಮಸೀದಿಗಳೂ ನಿರ್ನಾಮವಾಗುತ್ತಿದ್ದವು. ಅವುಗಳಲ್ಲಿ ಅಲ್ಲಾಹನ ನಾಮ ಹೆಚ್ಚು ಹೆಚ್ಚಾಗಿ ಸ್ಮರಿಸಲ್ಪಡುತ್ತದೆ. ತನಗೆ ನೆರವು ನೀಡುವವರಿಗೆ ಅಲ್ಲಾಹನು ಖಂಡಿತವಾಗಿಯೂ ನೆರವಾಗುತ್ತಾನೆ. ನಿಶ್ಚಯವಾಗಿಯೂ ಅಲ್ಲಾಹನು ಸರ್ವಸಮರ್ಥನೂ ಪ್ರತಾಪಶಾಲಿಯೂ ಆಗಿದ್ದಾನೆ.

ಈ ಭೀಕರ ಸಂಘಟನೆಗಳು ಎಲ್ಲವನ್ನೂ ಇಸ್ಲಾಮಿನ ಹೆಸರಿನಲ್ಲಿ ಮಾಡುತ್ತಿರುವುದು ಶಾಂತಿ ಪ್ರೇಮಿಗಳಾದ ನೈಜ ಮುಸ್ಲಿಮರಿಗೆ ದುಃಖವನ್ನೂ ನೋವನ್ನೂ ಉಂಟುಮಾಡುತ್ತಿದೆ. ಯಾಕೆಂದರೆ, ಇಂತಹ ಕ್ರೂರ ಮಾನವೀಯತೆರಹಿತ ಸಿದ್ಧಾಂತಗಳು ಯಾವ ಧರ್ಮದೊಂದಿಗೂ ಸಂಬಂಧ ಹೊಂದಿಲ್ಲ. ಎಲ್ಲ ರೀತಿಗಳಲ್ಲೂ ಎಲ್ಲ ಹಂತಗಳಲ್ಲೂ ಇಸ್ಲಾಮ್ ಧರ್ಮದ ನೈಜ ತತ್ವಗಳು ಎಲ್ಲ ಜನರಿಗೆ ಶಾಂತಿ ಮತ್ತು ಸಂರಕ್ಷಣೆ ನೀಡುವುದಾಗಿದೆ. ನಾವು ಪವಿತ್ರ ಖುರ್‌ಆನ್ ಮತ್ತು ಇಸ್ಲಾಮಿನ ಪ್ರವಾದಿ ಮುಹಮ್ಮದ್

ಪೈಗಂಬರರ(ಸ) ಜೀವಿತದ ಕಡೆಗೆ ದೃಷ್ಟಿ ಹಾಯಿಸಿದರೆ ತಿಳಿಯುವುದೇನೆಂದರೆ, ಆದ್ಯ ಕಾಲದ ಮುಸ್ಲಿಮರು ಯುದ್ಧವನ್ನು ಮತ್ತು ಹಿಂಸಾಚಾರವನ್ನು ಪ್ರಾರಂಭಿಸಿರಲಿಲ್ಲ. ಮುಸ್ಲಿಮರು ಎಂದಾದರೂ ಯುದ್ಧದಲ್ಲಿ ಭಾಗವಹಿಸಿದ್ದರೆ ಅದು ಪೂರ್ಣವಾಗಿ ಪ್ರತಿರೋಧಕ್ಕಾಗಿತ್ತು. ಅವರು ದೌರ್ಜನ್ಯಗಾರರನ್ನು ತಡೆಯಲು ಯುದ್ಧ ಮಾಡಿದರು. ಅವರು ತಮ್ಮ ಅಧಿಕಾರ ಸ್ಥಾಪಿಸಲು ಅಥವಾ ಅನ್ಯಾಯದಿಂದ ವರ್ತಿಸಲು ಯುದ್ಧ ಮಾಡಲಿಲ್ಲ. ಅವರು ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಅಥವಾ ಜನಾಂಗಗಳನ್ನು ವಶಪಡಿಸಿಕೊಳ್ಳಲು ಎಂದೂ ಯುದ್ಧ ಮಾಡಿರಲಿಲ್ಲ.

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಜೀವನ ಚರಿತ್ರೆ ಹೀಗೆ ಸಾಕ್ಷ್ಯ ಹೇಳುತ್ತದೆ: ತಾನು ಪ್ರವಾದಿ ಎಂದು ತನ್ನ ನಗರವಾದ ಮಕ್ಕದಲ್ಲಿ ವಾದಿಸಿದಾಗ ಅವರು ಇಸ್ಲಾಮ್ ಧರ್ಮವನ್ನು ಪ್ರೀತಿಯಿಂದಲೂ ವಾತ್ಸಲ್ಯದಿಂದಲೂ ಹರಡಲು ಪ್ರಯತ್ನಿಸಿದರು. ಆದರೆ ಮಕ್ಕದ ಜನರು ಅವರ ವಾದವನ್ನು ತಿರಸ್ಕರಿಸಿದರಲ್ಲದೆ ಅವರೊಂದಿಗೆ ಕ್ರೂರವಾಗಿಯೂ ನಿರ್ದಯವಾಗಿಯೂ ವರ್ತಿಸಿದರು. ಅವರನ್ನು ಮತ್ತು ಅವರ ಅನುಯಾಯಿಗಳನ್ನು ಕ್ರೂರ ಹಿಂಸಾಚಾರಗಳಿಗೆ ಗುರಿಪಡಿಸಲಾಯಿತು. ಕೊನೆಗೆ ದೇವಾಜ್ಞೆ ಪ್ರಕಾರ ಅವರು ಮಕ್ಕದಿಂದ ಮದೀನಕ್ಕೆ ವಲಸೆ ಹೋಗಬೇಕಾಯಿತು. ಆದರೆ ಮದೀನಕ್ಕೆ ವಲಸೆ ಹೋದ ಮುಸ್ಲಿಮರನ್ನು ಮಕ್ಕದ ನಿವಾಸಿಗಳು ಆಕ್ರಮಿಸಲು ಶಸ್ತ್ರಸಜ್ಜಿತರಾದ ಸೈನಿಕರನ್ನು ಕಳುಹಿಸಿದರು. ಇಂತಹ ಸಂದರ್ಭದಲ್ಲಿ ಪ್ರಥಮ ಬಾರಿ ಮುಸ್ಲಿಮರಿಗೆ ತಮ್ಮನ್ನು ರಕ್ಷಿಸಲು ಪ್ರತಿರೋಧಾತ್ಮಕ ಯುದ್ಧ ಮಾಡಲು ಅಲ್ಲಾಹನು ಅನುಮತಿ ನೀಡಿದನು.

ಅನುಮತಿ ನೀಡಿದುದರ ಕಾರಣವನ್ನು ಸ್ಪಷ್ಟವಾಗಿ ಪವಿತ್ರ ಖುರ್‌ಆನಿನ ಅಧ್ಯಾಯ 22 ವಚನ 40–41ರಲ್ಲಿ ಹೀಗೆ ವಿವರಿಸಲಾಗಿದೆ: ಅಲ್ಲಾಹನು ಮುಸ್ಲಿಮರಿಗೆ ತಮ್ಮನ್ನು ರಕ್ಷಿಸಲು ಪ್ರತಿರೋಧಾತ್ಮಕ ಯುದ್ಧ ಮಾಡಲು ಅನುಮತಿ ನೀಡಿದ್ದು ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲಿಕ್ಕಾಗಿದೆ. ವಿರೋಧಿಗಳು ಇಸ್ಲಾಮನ್ನು ಮಾತ್ರವಲ್ಲ, ಎಲ್ಲ ಧರ್ಮಗಳನ್ನು ಲೋಕದಿಂದ ಅಳಿಸಿ ಬಿಡಲು ಇಚ್ಛಿಸಿದ್ದರು. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ: ಈ ಅನುಮತಿ ನೀಡದಿರುತ್ತಿದ್ದರೆ ಇಗರ್ಜಿಗಳೂ ಯಹೂದಿ ದೇವಾಲಯಗಳೂ ಇತರ ದೇವಾಲಯಗಳೂ ಮಸೀದಿಗಳೂ ಆರಾಧನೆಯ ಬೇರೆ ಸ್ಥಳಗಳೂ ಸುರಕ್ಷಿತವಾಗಿರುತ್ತಿರಲಿಲ್ಲ. ಮುಸ್ಲಿಮರಿಗೆ ಯುದ್ಧ ಮಾಡಲು ಅನುಮತಿ ನೀಡಿದ್ದು, ಇಸ್ಲಾಮನ್ನು ಮಾತ್ರ ರಕ್ಷಿಸಲು ಆಗಿರಲಿಲ್ಲ; ಧರ್ಮವನ್ನು ರಕ್ಷಿಸಲಿಕ್ಕಾಗಿತ್ತು ಎಂದು ಮೇಲೆ ಉಲ್ಲೇಖಿಸಿದ ಪವಿತ್ರ ಖುರ್‌ಆನ್ ವಚನ ಸೂಚಿಸುತ್ತದೆ.

ಮುಸ್ಲಿಮೇತರರನ್ನು ಕೊಂದು ಅವರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು ಮತ್ತು ಅವರನ್ನು ಗುಲಾಮರನ್ನಾಗಿ ಮಾಡುವುದು ಅನುಮತನೀಯ ಎಂದು ಮುಸ್ಲಿಮ್

ನಾಮಧಾರಿಗಳು ಹೇಳುತ್ತಿರುವುದು ಸಂಪೂರ್ಣ ತಪ್ಪೆಂದು ಮೇಲೆ ಉಲ್ಲೇಖಿಸಿದ ಪವಿತ್ರ ಖುರ್‌ಆನ್ ವಚನದ ಬೆಳಕಿನಲ್ಲಿ ನೀವು ಮನವರಿಕೆ ಮಾಡಿಕೊಳ್ಳಬಹುದಾಗಿದೆ. ವಾಸ್ತವದಲ್ಲಿ, ಇಸ್ಲಾಮ್ ಪ್ರತಿಯೊಬ್ಬ ವ್ಯಕ್ತಿಗೆ ಸ್ವತಂತ್ರನಾಗಿರಲು ಹಕ್ಕು ನೀಡಿದ ಧರ್ಮವಾಗಿದೆ. ವ್ಯಕ್ತಿಯ ಧರ್ಮ ಮತ್ತು ಹಿನ್ನೆಲೆಯನ್ನು ಪರಿಗಣಿಸದೆ ಪ್ರತಿಯೊಬ್ಬ ವ್ಯಕ್ತಿ ಶಾಂತಿಯಿಂದಲೂ ಸೌಹಾರ್ದದಿಂದಲೂ ಜೀವಿಸಲು ಹಕ್ಕು ನೀಡಿದ ಧರ್ಮ ಇಸ್ಲಾಮ್ ಆಗಿದೆ.

ಹಝ್ರತ್ ಮುಹಮ್ಮದ್ ಪೈಗಂಬರ್[ಸ] ತನ್ನ ಅನುಯಾಯಿಗಳ ಜೊತೆಯಲ್ಲಿ ಮದೀನಕ್ಕೆ ವಲಸೆ ಹೋದ ಬಗ್ಗೆ ನಾನು ಇದರ ಮೊದಲು ಪ್ರಸ್ತಾಪಿಸಿದ್ದೇನೆ. ಅವರು ಮದೀನದ ಜನರೊಂದಿಗೆ ಭಾವೈಕ್ಯ ಹೊಂದಿದ ರೀತಿ ಪರಿಪೂರ್ಣ ಮಾದರಿಯಾಗಿದೆ. ಮುಸ್ಲಿಮರು ಮದೀನಕ್ಕೆ ಆಗಮಿಸುವ ಮೊದಲು ಅಲ್ಲಿ ಎರಡು ಮುಖ್ಯ ಗುಂಪುಗಳಿದ್ದವು. ಯಹೂದಿಯರು ಮತ್ತು ಅರಬಿಗಳ ಗುಂಪುಗಳು. ಮುಸ್ಲಿಮರ ಆಗಮನ ನಂತರ ಮೂರು ಗುಂಪುಗಳು ಆದವು. ಮುಸ್ಲಿಮರ, ಯಹೂದಿಯರ ಮತ್ತು ಮುಸ್ಲಿಮೇತರ ಅರಬಿಗಳ ಗುಂಪುಗಳು. ಹಝ್ರತ್ ಪೈಗಂಬರ್[ಸ] ಅಲ್ಲಿಗೆ ಹೋದ ಕೂಡಲೆ ಹೇಳಿದರು: "ನಾವೆಲ್ಲರೂ ಶಾಂತಿ ಮತ್ತು ಸೌಹಾರ್ದದಿಂದ ಜೀವಿಸಬೇಕು." ಅವರು ಒಂದು ಶಾಂತಿಯ ಒಪ್ಪಂದವನ್ನು ಸಿದ್ಧಪಡಿಸಿದರು. ಈ ಒಪ್ಪಂದ ಪ್ರಕಾರ ಪ್ರತಿಯೊಂದು ಗುಂಪು ಮತ್ತು ಪ್ರತಿಯೊಂದು ಗೋತ್ರಕ್ಕೆ ಅವರಿಗೆ ಸಲ್ಲಬೇಕಾದ ಹಕ್ಕುಗಳನ್ನು ನೀಡಲಾಯಿತು. ಎಲ್ಲ ಗುಂಪುಗಳ ಜೀವ ಮತ್ತು ಸಂಪತ್ತಿಗೆ ಸಂರಕ್ಷಣೆಯ ಖಾತರಿ ನೀಡಲಾಯಿತು. ಹಿಂದೆ ಆಚರಿಸಲಾಗುತ್ತಿದ್ದ ಗೋತ್ರಗಳ ಮಧ್ಯೆ ಇರುವ ಸಂಪ್ರದಾಯಗಳನ್ನು ಗೌರವಿಸಲಾಯಿತು. ಮಕ್ಕದಿಂದ ಯಾರಾದರೂ ಬಂದು ಹಾನಿಯನ್ನುಂಟು ಮಾಡಲು ಬಯಸಿದರೆ ಅವನಿಗೆ ಮದೀನದಲ್ಲಿ ಯಾರೂ ಆಶ್ರಯ ನೀಡಬಾರದೆಂದೂ ಅಂತಹ ವ್ಯಕ್ತಿಗಳೊಂದಿಗೆ ಒಪ್ಪಂದ ಮಾಡಬಾರದೆಂದೂ ಒಮ್ಮತದಿಂದ ನಿರ್ಧರಿಸಲಾಯಿತು. ಶತ್ರುಗಳು ಆಕ್ರಮಿಸಿದರೆ ಮದೀನದ ಎಲ್ಲರೂ ಜೊತೆ ಸೇರಿ ಪ್ರತಿರೋಧಿಸಬೇಕೆಂದು ನಿರ್ಧರಿಸಲಾಯಿತು. ಆದರೆ ಮದೀನದ ಹೊರಗೆ ಮುಸ್ಲಿಮರು ಶತ್ರುಗಳಿಂದ ಆಕ್ರಮಿಸಲ್ಪಟ್ಟರೆ ಅಥವಾ ಯುದ್ಧದಲ್ಲಿ ಏರ್ಪಟ್ಟರೆ, ಮುಸ್ಲಿಮರಿಗೆ ನೆರವು ನೀಡಲು ಮುಸ್ಲಿಮೇತರರನ್ನು ನಿರ್ಬಂಧಿಸಲಾಗದು ಎಂದು ನಿರ್ಧರಿಸಲಾಗಿತ್ತು. ಯಹೂದಿಯರು ಇತರ ಗುಂಪುಗಳೊಂದಿಗೆ ಮಾಡಿಕೊಂಡ ಒಪ್ಪಂದಗಳನ್ನು ಮುಸ್ಲಿಮರು ಅಂಗೀಕರಿಸುವರು; ಯಹೂದಿಯರು ತಮ್ಮ ಧರ್ಮ ಪ್ರಕಾರ ಮತ್ತು ಮುಸ್ಲಿಮರು ತಮ್ಮ ಧರ್ಮದ ಪ್ರಕಾರ ಜೀವಿಸುವರೆಂದು ಒಪ್ಪಂದ ಮಾಡಲಾಗಿತ್ತು.

ಮೂರು ಗುಂಪುಗಳು ಒಪ್ಪಂದ ಶರತ್ತುಗಳನ್ನು ಅಂಗೀಕರಿಸಿದ ನಂತರ ಹಝ್ರತ್ ಪೈಗಂಬರ್[ಸ] ಮದೀನದ ಮುಖ್ಯ ಆಡಳಿತಾಧಿಕಾರಿಯಾಗಬೇಕೆಂದು ಒಮ್ಮತದಿಂದ ಅಂಗೀಕರಿಸಲಾಯಿತು. ಆದರೆ ಯಹೂದಿಯರು ಮುಸ್ಲಿಮ್ ಶರೀಅತ್ ಪ್ರಕಾರ ಜೀವಿಸಬೇಕಾಗಿಲ್ಲ;

ಅವರು ಯಹೂದಿಯರ ನಿಯಮಗಳನ್ನೂ ಸಂಪ್ರದಾಯಗಳನ್ನೂ ಪಾಲಿಸಬಹುದೆಂದು ಒಪ್ಪಂದವಾಗಿತ್ತು. ಇದು ಇಸ್ಲಾಮಿನ ಪುಣ್ಯ ಪ್ರವಾದಿ ತೋರಿಸಿದ ಸಹಿಷ್ಣು ಮನೋಭಾವ ಮತ್ತು ಪರಸ್ಪರ ಗೌರವವಾಗಿದೆ. ಆದರೆ ವ್ಯಕ್ತಿ ಯಾವ ಧರ್ಮ ಅಥವಾ ಹಿನ್ನೆಲೆಯುಳ್ಳವನಾದರೂ ಅವನ ಮೇಲೆ ಶರೀಅತ್ ನಿಯಮಗಳನ್ನು ಹೇರಬೇಕೆಂದು ಐಸಿಎಸ್ ವಾದಿಸುತ್ತದೆ.

ಹಝ್ರತ್ ಪೈಗಂಬರ್(ಸ) ಆ ಒಪ್ಪಂದದ ಮೂಲಕ ಮಹಿಳೆಯರ ಹಕ್ಕುಗಳನ್ನು ಸಹ ಸಂರಕ್ಷಿಸಿದ್ದರು. ಮಹಿಳೆಯನ್ನು ಅವಳ ಇಚ್ಛೆಗೆ ವಿರುದ್ಧವಾಗಿ ಮನೆಯಿಂದ ಬಲಾತ್ಕಾರವಾಗಿ ಹೊರಹಾಕಬಾರದೆಂದು ಸ್ಪಷ್ಟವಾಗಿ ಬರೆಯಲಾಗಿತ್ತು. ಹೀಗಿರುವಾಗ ಮುಸ್ಲಿಮೇತರ ಮಹಿಳೆಯರನ್ನು ತಮ್ಮ ಸ್ವತ್ತೆಂದು ಪರಿಗಣಿಸಬಹುದೆಂದು ಐಸಿಸ್ ವಾದಿಸುವುದು ಹೇಗೆ? ಯಾರನ್ನೂ ಮುಸ್ಲಿಮನಾಗಲು ಬಲಾತ್ಕಾರ ಮಾಡಲಾಗದೆಂದೂ ಮದೀನದ ಯಹೂದಿಯರೊಂದಿಗೆ ಮತ್ತು ಮುಸ್ಲಿಮೇತರರೊಂದಿಗೆ ಪ್ರೀತಿ, ಕರುಣೆ ಮತ್ತು ಸಹೋದರ ಭಾವನೆಯಿಂದ ಮುಸ್ಲಿಮರು ವರ್ತಿಸುವರೆಂದೂ ಸ್ಪಷ್ಟವಾಗಿ ಒಪ್ಪಂದದಲ್ಲಿ ಬರೆಯಲಾಗಿತ್ತು.

ಮೇಲೆ ವಿವರಿಸಿದ್ದು ಒಪ್ಪಂದದ ಸಾರಾಂಶವಾಗಿದೆ. ಮುಸ್ಲಿಮರು ಮದೀನಕ್ಕೆ ಆಗಮಿಸಿದ ನಂತರ ಮದೀನದ ಸಮಾಜವನ್ನು ಹೀಗೆ ಒಗ್ಗೂಡಿಸಲಾಗಿತ್ತು. ಮುಸ್ಲಿಮರು ಈ ಒಪ್ಪಂದವನ್ನು ಅಕ್ಷರಶಃ ಪಾಲಿಸಿದರೆಂದು ಚರಿತ್ರೆ ಸಾಕ್ಷ್ಯ ಹೇಳುತ್ತದೆ. ಈ ಒಪ್ಪಂದ ಎಂದಾದರೂ ಭಂಗಗೊಳಿಸಲ್ಪಟ್ಟಿದ್ದರೆ ಅದನ್ನು ಮಾಡಿದ್ದು ಮುಸ್ಲಿಮರಲ್ಲದ ಗುಂಪಾಗಿತ್ತು. ಒಪ್ಪಂದವನ್ನು ಭಂಗಪಡಿಸಿದ ಅಥವಾ ಬೇರೆ ತಪ್ಪು ಕೃತ್ಯಗಳನ್ನು ಮಾಡಿದ ವ್ಯಕ್ತಿಗಳು ಮತ್ತು ಗುಂಪುಗಳ ಮೇಲೆ ಹಝ್ರತ್ ಪೈಗಂಬರರಿಗೆ(ಸ) ಮದೀನದ ಆಡಳಿತಾಧಿಕಾರಿಯಾಗಿ ಒಮ್ಮತದಿಂದ ಆರಿಸಲ್ಪಟ್ಟ ನೇತಾರ ಎಂಬ ನೆಲೆಯಲ್ಲಿ ಶಿಸ್ತುಕ್ರಮಗಳನ್ನು ಕೈಗೊಳ್ಳಬೇಕಾಗುತಿತ್ತು. ಅವರಿಗೆ ವಾಗ್ದಂಡನೆ ಒಪ್ಪಂದ ಪ್ರಕಾರ ನೀಡಲಾಗುತ್ತಿತ್ತು. ಯಾವುದೇ ಅನ್ಯಾಯ ಮಾಡುತ್ತಿರಲಿಲ್ಲ. ಇದು ಇಸ್ಲಾಮಿ ಆಡಳಿತೆಯ ನೈಜ ಪ್ರಕಟನೆಯಾಗಿತ್ತು. ಇದಕ್ಕೆ ಆಸ್ತಿಭಾರವನ್ನು ಹಝ್ರತ್ ಪೈಗಂಬರ್(ಸ) ಹಾಕಿದರು. ಅವರ ಮಾದರಿಯನ್ನು ಅವರ ನಂತರ ಅಧಿಕಾರ ವಹಿಸಿದ ನಾಲ್ವರು ನೇರಮಾರ್ಗದಲ್ಲಿ ಚಲಿಸಿದ ಖಲೀಫರು ಇಸ್ಲಾಮಿನ ಪ್ರಥಮ ಶತಮಾನದಲ್ಲಿ ಮುಂದುವರಿಸಿದರು.

ಇಂದಿನ ಕಾಲದಲ್ಲಿ ಐಸಿಸ್ ಅಥವಾ ಬೇರೆ ಯಾವುದೇ ಮುಸ್ಲಿಮ್ ಸರಕಾರ ಮೇಲೆ ವಿವರಿಸಿದ ನೈಜ ನ್ಯಾಯ ಮತ್ತು ಸಮತೆಯ ತತ್ವಗಳಿಗೆ ವಿರುದ್ಧವಾಗಿ ವರ್ತಿಸಿದರೆ ಅವರು ಹಾಗೆ ಮಾಡುವುದು ತಮ್ಮ ಸ್ವಾರ್ಥ ಹಿತಾಸಕ್ತಿಗಳನ್ನು ಅಥವಾ ರಾಜಕೀಯ ಹಿತಾಸಕ್ತಿಗಳನ್ನು ಈಡೇರಿಸಲಿಕ್ಕಾಗಿದೆ.

ಈ ಜನರು ತಾವು ಇಸ್ಲಾಮ್ ಪ್ರಕಾರ ವರ್ತಿಸುತ್ತಿರುವುದಾಗಿ ವಾದಿಸುತ್ತಾರಾದರೂ ಅವರ

ಕೃತ್ಯಗಳಿಗೆ ಇಸ್ಲಾಮ್‌ನೊಂದಿಗೆ ಅಥವಾ ಹಝ್ರತ್ ಪೈಗಂಬರರ(ಸ) ಉಪದೇಶಗಳೊಂದಿಗೆ ಯಾವ ಸಂಬಂಧವೂ ಇಲ್ಲ.

ಹಝ್ರತ್ ಪೈಗಂಬರರ(ಸ) ಆಗಮನದ ಮುಂಚೆ ಅರಬ್ ದೇಶದ ಚರಿತ್ರೆಯ ಕಡೆಗೆ ನೋಡಿದರೆ, ಪ್ರತಿಯೊಂದು ಗೋತ್ರ ತನ್ನ ಅಧಿಕಾರವನ್ನು ಯುದ್ಧ ಮತ್ತು ರಕ್ತಪಾತ ಮೂಲಕ ಚಲಾಯಿಸುತ್ತಿದ್ದ ಸಮಾಜವಾಗಿತ್ತು ಎಂದು ತಿಳಿದುಬರುತ್ತದೆ. ಇಂತಹ ಸಮಾಜದಲ್ಲಿ ಹಝ್ರತ್ ಪೈಗಂಬರರು(ಸ) ಕ್ರಾಂತಿಯನ್ನುಂಟು ಮಾಡಿದರು. ಅವರು ನ್ಯಾಯಪಾಲನೆ ವ್ಯವಸ್ಥೆ ಮಾಡಿದರು. ಪ್ರತಿಯೊಂದು ಗುಂಪಿಗೆ ಅದರ ಸಂಪ್ರದಾಯ ಮತ್ತು ಧಾರ್ಮಿಕ ನಂಬಿಕೆಗಳ ಪ್ರಕಾರ ನ್ಯಾಯದಾನ ನೀಡಲಾಯಿತು.

ಇಸ್ಲಾಮ್ ಧರ್ಮದ ಚರಿತ್ರೆಯನ್ನು ಪಕ್ಷಪಾತರಹಿತವಾಗಿ ಅಧ್ಯಯನ ಮಾಡಿದರೆ ಹಝ್ರತ್ ಪೈಗಂಬರರ(ಸ) ಮತ್ತು ಅನಂತರ ನಾಲ್ವರು ನೇರ ಮಾರ್ಗದಲ್ಲಿ ಚಲಿಸಿದ ಖಲೀಫರ ಕಾಲದಲ್ಲಿ ಮುಸ್ಲಿಮರ ಸ್ವಭಾವ ಗುಣಗಳು ಕಳಂಕರಹಿತವಾಗಿದ್ದುವು ಎಂದು ತಿಳಿದುಬರುವುದು. ಅವರು ಯಾವುದೇ ಯುದ್ಧವನ್ನು ಆಕ್ರಮಣಗಾರರಾಗಿ ಪ್ರಾರಂಭಿಸಿರಲಿಲ್ಲ. ಅವರು ಅನ್ಯ ದೇಶಗಳನ್ನು ವಶಪಡಿಸಲು ಇಚ್ಛಿಸಿರಲಿಲ್ಲ. ಅವರು ಇಸ್ಲಾಮ್ ಧರ್ಮದ ಸಂದೇಶಗಳನ್ನು ಸಂಪೂರ್ಣವಾಗಿ ಶಾಂತಿಯಿಂದ ಪ್ರಚಾರಗೊಳಿಸಿದರು. ಉದಾಹರಣೆಗೆ, ದಕ್ಷಿಣ ಭಾರತದಲ್ಲೂ ಚೀನಾ ದೇಶದಲ್ಲೂ ಇಸ್ಲಾಮ್ ಹರಡಿತು. ಆದರೆ ಈ ದೇಶಗಳನ್ನು ಮುಸ್ಲಿಮ್ ಸೈನ್ಯ ಆಕ್ರಮಿಸಿತೆಂದು ಚರಿತ್ರೆ ಹೇಳುವುದಿಲ್ಲ. ಆ ಪ್ರದೇಶಗಳಲ್ಲಿ ಇಸ್ಲಾಮ್ ಧರ್ಮ ಹರಡಿದ್ದು ಶಾಂತಿಯ ಮಾರ್ಗದ ಮೂಲಕವಾಗಿದೆ. ಅನಂತರದ ಕಾಲಘಟ್ಟಗಳಲ್ಲಿ ಮುಸ್ಲಿಮ್ ದೊರೆಗಳು ವಿವಿಧ  ಕಾರಣಗಳಿಂದ ಯುದ್ಧವನ್ನು ಪ್ರಾರಂಭಿಸಿದ್ದರು. ಅದಕ್ಕೋಸ್ಕರ ಅವರನ್ನು ಮಾತ್ರ ದೂಷಿಸಬಾರದು. ಅಂತಹ ಯುದ್ಧಗಳ ಮೂಲಕ ವಶಪಡಿಸಿಕೊಂಡ ದೇಶಗಳ ನಿವಾಸಿಗಳನ್ನು ಮುಸ್ಲಿಮರಾಗಲು ಆ ದೊರೆಗಳು ಎಂದೂ ಬಲಾತ್ಕಾರ ಮಾಡಿರಲಿಲ್ಲ. ನಿಶ್ಚಯವಾಗಿಯೂ ಪವಿತ್ರ ಖುರ್‌ಆನ್ ಅಂತಹ ಪ್ರಯತ್ನ ಮಾಡುವುದನ್ನು ತಿರಸ್ಕರಿಸುತ್ತದೆ ಮತ್ತು ಧರ್ಮ ಪ್ರಚಾರ ಶಾಂತಿಯುತವಾಗಿ ನಡೆಸಬೇಕೆಂದು ಉಪದೇಶಿಸುತ್ತದೆ.

ನಾನು ಇದರ ಮೊದಲು ಹೇಳಿದ ಹಾಗೆ ಅಲ್ಲಾಹನು ಪ್ರತಿರೋಧಕ ಧಾರ್ಮಿಕ ಯುದ್ಧಗಳಿಗೆ ಅನುಮತಿ ನೀಡಿದ್ದು ಎಲ್ಲ ಧರ್ಮಗಳನ್ನು ಸಂರಕ್ಷಿಸಲಿಕ್ಕಾಗಿತ್ತೇ ಹೊರತು ಕೇವಲ ಇಸ್ಲಾಮನ್ನು ಸಂರಕ್ಷಿಸಲಿಕ್ಕಾಗಿರಲಿಲ್ಲ. ಪವಿತ್ರ ಖುರ್‌ಆನ್ ವಿವಿಧ ವಚನಗಳಲ್ಲಿ ಸರ್ವಶಕ್ತನಾದ ಅಲ್ಲಾಹನು ಯುದ್ಧಗಳಲ್ಲಿ ಪಾಲಿಸಬೇಕಾದ ನಿಯಮಗಳನ್ನು ವಿವರಿಸಿರುವನು.

ಉದಾಹರಣೆಗೆ, ಪವಿತ್ರ ಖುರ್‌ಆನ್ ಅಧ್ಯಾಯ 2 ವಚನ 191ರಲ್ಲಿ ಅಲ್ಲಾಹನು ಪ್ರತಿರೋಧಕ ಯುದ್ಧದ ನಿಯಮಗಳನ್ನು ಹೀಗೆ ವಿವರಿಸಿರುವನು: ನಿಮ್ಮ ವಿರುದ್ಧ ಯುದ್ಧ

ಮಾಡುವವರೊಂದಿಗೆ ಮಾತ್ರ ಯುದ್ಧ ಮಾಡಬೇಕೆಂದೂ ಅತಿಕ್ರಮಣ ಮಾಡಬಾರದೆಂದೂ ಕ್ರೂರತೆಯಿಂದ ವರ್ತಿಸಬಾರದೆಂದೂ ಅನ್ಯಾಯದಿಂದ ವರ್ತಿಸುವವರನ್ನು ಅಲ್ಲಾಹನು ಪ್ರೀತಿಸುವುದಿಲ್ಲವೆಂದೂ ಹೇಳಿರುವನು.

ಪವಿತ್ರ ಖುರ್‌ಆನ್ ಅಧ್ಯಾಯ 16 ವಚನ 127ರಲ್ಲಿ ಅಲ್ಲಾಹನು ಮುಸ್ಲಿಮರಿಗೆ, ಯುದ್ಧ ಮಾಡುವಾಗ ಎಂದೂ ಪರಿಮಿತಿ ಮೀರಿ ಆಕ್ರಮಣ ಮಾಡಬಾರದೆಂದೂ ಶಿಕ್ಷೆಯು ನಿಮ್ಮ ಮೇಲೆ ಉಂಟಾದ ಅಕ್ರಮಕ್ಕೆ ಸಮಾನವಾಗಿರಬೇಕೆಂದೂ ಆಜ್ಞಾಪಿಸಿದ್ದಾನೆ.

ಪವಿತ್ರ ಖುರ್‌ಆನ್ ಅಧ್ಯಾಯ 2 ವಚನ 194ರಲ್ಲಿ ಅಲ್ಲಾಹನು ಹೇಳುತ್ತಾನೆ: ಹಿಂಸಾಚಾರ ಕೊನೆಗೊಂಡು ಧರ್ಮ ಸ್ವೀಕಾರ ಅಲ್ಲಾಹನಿಗೋಸ್ಕರವಾಗುವ ತನಕ ಮಾತ್ರ ಯುದ್ಧ ಮಾಡಬೇಕು. ದುಷ್ಕರ್ಮಿಗಳು ಯುದ್ಧದಿಂದ ಹಿಂದೆಸರಿದರೆ ಮತ್ತು ಅಸ್ತವ್ಯಸ್ತತೆ ಕೊನೆಗೊಂಡರೆ ಅವರ ವಿರುದ್ಧ ಯುದ್ಧವನ್ನು ಮುಂದುವರಿಸಬಾರದು.

ಪವಿತ್ರ ಖುರ್‌ಆನ್ ಅಧ್ಯಾಯ 8 ವಚನ 62ರಲ್ಲಿ ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: ವಿರೋಧಿಗಳು ಶಾಂತಿಯ ಕಡೆಗೆ ವಾಲಿದರೆ ಮತ್ತು ಸೌಹಾರ್ದಕ್ಕೆ ಕೈ ಚಾಚಿದರೆ ಮುಸ್ಲಿಮರು ಅದಕ್ಕೆ ಒಪ್ಪಬೇಕು. ವಿರೋಧಿಗಳು ಪ್ರಾಮಾಣಿಕರಾಗಿ ಹಾಗೆ ಮಾಡುತ್ತಿರುವರೋ ಎಂದು ಪ್ರಶ್ನಿಸಬಾರದು.

ಪವಿತ್ರ ಖುರ್‌ಆನ್ ಅಧ್ಯಾಯ 9 ವಚನ 4ರಲ್ಲಿ ಹೀಗೆ ಹೇಳಲಾಗಿದೆ: ಮುಸ್ಲಿಮರು ಬಹುದೇವಾರಾಧಕರೊಂದಿಗೆ ಮಾಡಿಕೊಂಡ ಒಪ್ಪಂದವನ್ನು ಅವರು ಅತಿಕ್ರಮಣ ಮಾಡದೆ ಒಪ್ಪಂದದ ಶರತ್ತುಗಳನ್ನು ಪಾಲಿಸಿದ್ದರೆ ಅದನ್ನು ಸಂಪೂರ್ಣವಾಗಿ ಪೂರ್ತಿಗೊಳಿಸಬೇಕು. ಸಾತ್ವಿಕರಾದವರು ಅವಶ್ಯವಾಗಿ ಹೀಗೆ ಮಾಡಬೇಕು. ಅಲ್ಲಾಹನು ಸಾತ್ವಿಕರನ್ನು ಪ್ರೀತಿಸುತ್ತಾನೆ.

ಪವಿತ್ರ ಖುರ್‌ಅನ್ ಅಧ್ಯಾಯ 5 ವಚನ 9ರಲ್ಲಿ ಹೀಗೆ ಹೇಳಲಾಗಿದೆ: ಯುದ್ಧ ಕಾಲದಲ್ಲಿಯೂ ಮುಸ್ಲಿಮರು ಶತ್ರುಗಳೊಂದಿಗೆ ನ್ಯಾಯೋಚಿತವಾಗಿ ವರ್ತಿಸಬೇಕು. ಒಂದು ಜನಾಂಗದವರ ಶತ್ರುತ್ವ ಅವರ ವಿರುದ್ಧ ಅನ್ಯಾಯದಿಂದ ವರ್ತಿಸಲು ಮುಸ್ಲಿಮರನ್ನು ಪ್ರೇರೇಪಿಸಬಾರದು. ಅನ್ಯಾಯದಿಂದ ವರ್ತಿಸುವುದು ಸಾತ್ವಿಕತೆಗೆ ವಿರುದ್ಧವಾದುದಾಗಿದೆ.

ಪವಿತ್ರ ಖುರ್‌ಆನ್ ಅಧ್ಯಾಯ 8 ವಚನ 68ರಲ್ಲಿ ಹೀಗೆ ಹೇಳಲಾಗಿದೆ: ಯುದ್ಧ ಮಾಡಿ ಶತ್ರುಗಳನ್ನು ಸೋಲಿಸುವ ಮೂಲಕ ಹೊರತು ಯುದ್ಧ ಕೈದಿಗಳನ್ನು ಹೊಂದುವುದು ಒಬ್ಬ ಪ್ರವಾದಿಗೆ ಸಲ್ಲದು. ಹಾಗೆ ಮಾಡುವುದು ದೇವನ ಪ್ರೀತಿಯನ್ನು ಗಳಿಸುವುದಕ್ಕೆ ಬದಲಾಗಿ ಸಂಪತ್ತು ಮತ್ತು ಅಧಿಕಾರ ಗಳಿಸಲು ಆದ್ಯತೆ ನೀಡುತ್ತೀರಿ ಎಂದಾಗುತ್ತದೆ. ಪವಿತ್ರ ಖುರ್‌ಆನಿನ ಈ ವಚನ ಸಾಬೀತುಗೊಳಿಸುವುದೇನೆಂದರೆ, ಯುದ್ಧದ ಸಂದರ್ಭದಲ್ಲಿ ಹೊರತು ಬೇರೆ ಸಂದರ್ಭದಲ್ಲಿ ಯಾರನ್ನಾದರೂ ಬಂಧಿಸಿಡುವುದು ನಿಷಿದ್ಧವಾಗಿದೆ. ಆದರೆ ಇಂದಿನ ಕಾಲದಲ್ಲಿ

‘ಇಸ್ಲಾಮಿಸ್ಟ್’ ನಾಮಧಾರಿಗಳು ಅಸಂಖ್ಯಾತ ನಿರಪರಾಧಿಗಳಾದ ಜನರನ್ನು ಬಂಧಿಸಿಡುತ್ತಾರೆ ಮತ್ತು ಸಂರಕ್ಷಣೆ ರಹಿತ ಮಹಿಳೆಯರನ್ನು ಉಪಪತ್ನಿಯರನ್ನಾಗಿ ಮಾಡಿಕೊಳ್ಳುತ್ತಿದ್ದಾರೆ.

ಪವಿತ್ರ ಖುರ್‌ಆನ್ ಅಧ್ಯಾಯ 47 ವಚನ 5ರಲ್ಲಿ ಸರ್ವಶಕ್ತನಾದ ಅಲ್ಲಾಹನು ಹೀಗೆ ಹೇಳಿದ್ದಾನೆ: ಯುದ್ಧವು ಮುಕ್ತಾಯಗೊಂಡ ನಂತರ ಯುದ್ಧ ಕೈದಿಗಳನ್ನು ಸ್ವತಂತ್ರರನ್ನಾಗಿ ಮಾಡಬೇಕು. ಅವರಿಂದ ಪರಿಹಾರ ಧನ ಪಡೆದು ಬಿಡುಗಡೆ ಮಾಡಬಹುದು ಅಥವಾ ಅವರ ಮೇಲೆ ದಯೆದೋರಿ ಬಿಡುಗಡೆ ಮಾಡಬಹುದು. ಯುದ್ಧ ಮುಕ್ತಾಯವಾದ ನಂತರ ಯುದ್ಧ ಕೈದಿಗಳನ್ನು ಬಿಡುಗಡೆ ಮಾಡಬೇಕೆಂಬುದು ಪುರುಷರಿಗೂ ಮಹಿಳೆಯರಿಗೂ ಅನ್ವಯಿಸುತ್ತದೆ. ಹಿಂದಿನ ಕಾಲದಲ್ಲಿ ಮಹಿಳೆಯರು ಪುರುಷರಿಗೆ ಸಹಾಯ ಮಾಡಲು ಮತ್ತು ಹೋರಾಟವನ್ನು ಉತ್ತೇಜಿಸಲು ರಣಾಂಗಣಕ್ಕೆ ಹೋಗುತ್ತಿದ್ದರು. ಆದುದರಿಂದ ಮಹಿಳೆಯರೂ ಬಂಧಿಸಲ್ಪಡುತ್ತಿದ್ದರು. ಪವಿತ್ರ ಖುರ್‌ಆನ್ ಮಹಿಳೆಯರ ಜೊತೆ ಕ್ರೂರವಾಗಿಯೂ ಅವರ ಚಾರಿತ್ರ್ಯಕ್ಕೆ ಭಂಗವುಂಟಾಗುವಂತೆಯೂ ವರ್ತಿಸಬಾರದೆಂದು ಸ್ಪಷ್ಟವಾಗಿ ಆಜ್ಞಾಪಿಸಿದೆ.

ಯುದ್ಧ ಕೈದಿಯನ್ನು ಬಿಡುಗಡೆಗೊಳಿಸುವ ಬಗ್ಗೆ ಪವಿತ್ರ ಖುರ್‌ಆನ್ ಅಧ್ಯಾಯ 24 ವಚನ 34ರಲ್ಲಿ ಹೀಗೆ ಹೇಳಲಾಗಿದೆ: ಬಿಡುಗಡೆಗೊಳಿಸಲು ಪರಿಹಾರದ ಧನವನ್ನು ಕಂತುಗಳಲ್ಲಿ ಪಡೆಯುವ ಒಪ್ಪಂದ ಮಾಡಿ ಯುದ್ಧ ಕೈದಿಯನ್ನು ಬಿಡುಗಡೆಗೊಳಿಸಬೇಕು.

ಯುದ್ಧ ಕೈದಿಗಳನ್ನು ಬಿಡುಗಡೆಗೊಳಿಸುವ ಬಗ್ಗೆ ಪವಿತ್ರ ಖುರ್‌ಆನಿನ ವಚನಗಳನ್ನು ಸರಿಯಾಗಿ ಮನವರಿಕೆ ಮಾಡಲು ಆ ಕಾಲಘಟ್ಟದ ಯುದ್ಧಗಳ ಬಗ್ಗೆ ತಿಳಿದುಕೊಳ್ಳಬೇಕು. ಆ ಕಾಲಘಟ್ಟದಲ್ಲಿ ಯೋಧರು ಸ್ವಂತ ಆಯುಧಗಳನ್ನು ತಂದು ತಮ್ಮ ಸ್ವಂತ ಖರ್ಚಿನಲ್ಲಿ ಯುದ್ಧ ಮಾಡುತ್ತಿದ್ದರು. ಆದುದರಿಂದ ಅವರು ಸೆರೆಹಿಡಿದ ಕೈದಿಗಳನ್ನು ಬಿಡುಗಡೆಗೊಳಿಸಲು ಪರಿಹಾರ ದ್ರವ್ಯ ಪಡೆಯಲು ಅನುಮತಿ ನೀಡಲಾಗಿತ್ತು. ಆದರೆ ಇಂದಿನ ಕಾಲದಲ್ಲಿ ಸರಕಾರಗಳು ಯುದ್ಧ ನಡೆಸುತ್ತಿವೆ ಮತ್ತು ಅದಕ್ಕೆ ಖರ್ಚು ಮಾಡುತ್ತವೆ. ಸೈನಿಕರಿಗೆ ವೈಯಕ್ತಿಕವಾಗಿ ಖರ್ಚು ಮಾಡುವ ಅವಶ್ಯಕತೆ ಇರುವುದಿಲ್ಲ. ಆದುದರಿಂದ ಈಗ ಯುದ್ಧ ಕೈದಿಗಳೊಂದಿಗೆ ಹೇಗೆ ವರ್ತಿಸಬೇಕೆಂಬುದನ್ನು ಸರಕಾರಗಳು ಮತ್ತು ಅಂತರ್‍ರಾಷ್ಟ್ರೀಯ ಸಂಘಟನೆಗಳು ನಿರ್ಧರಿಸುತ್ತವೆ. ಸೈನಿಕರಿಗೆ ಅದರಲ್ಲಿ ಪಾತ್ರವಿರುವುದಿಲ್ಲ. ಯುದ್ಧಕೈದಿಗಳ ಪರಸ್ಪರ ಹಂಚಿಕೆ ಮತ್ತು ಬದಲಾವಣೆ ಸರಕಾರಗಳು ನಿರ್ಧರಿಸುತ್ತವೆ ಮತ್ತು ದೀರ್ಘಕಾಲೀನ ಶಾಂತಿ ಸ್ಥಾಪನೆಗೆ ಪ್ರಯತ್ನಿಸುತ್ತವೆ. ವ್ಯಕ್ತಿಗಳು ಕೈದಿಗಳನ್ನು ಹೊಂದುವ ಪರಿಸ್ಥಿತಿ ಖಂಡಿತವಾಗಿಯೂ ಇಂದು ಇಲ್ಲ. ಹಾಗೆ ಯಾರಾದರೂ ಮಾಡಿದರೆ ಅದು ಇಸ್ಲಾಮ್ ಧರ್ಮ ತತ್ವಗಳಿಗೆ ವಿರುದ್ಧವಾಗಿರುತ್ತದೆ.

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಸಹ ಹೇಳಿದ್ದಾನೆ: “ನೀವು ಅನ್ಯರ ಸಂಪತ್ತಿನ ಕಡೆಗೆ ಅಸೂಯೆಯಿಂದ ದೃಷ್ಟಿ ಹಾಯಿಸಬಾರದು.” ಇದು ಜಾಗತಿಕ ಶಾಂತಿ ಸ್ಥಾಪನೆಗೆ

ಅನುಕೂಲವಾದ ಸುವರ್ಣ ಸತ್ಯವಾಗಿದೆ. ಇಸ್ಲಾಮಿನ ಈ ಒಂದು ಆಜ್ಞೆಯನ್ನು ಅನುಷ್ಠಾನಕ್ಕೆ ತರುವುದಾದರೆ ಮುಸ್ಲಿಮನು ಅನ್ಯರ ಭೂಸ್ವತ್ತು ಮತ್ತು ಸಂಪತ್ತನ್ನು ವಶಪಡಿಸಿಕೊಳ್ಳುವ ಪ್ರಶ್ನೆಯೇ ತಲೆದೋರದು.

ಪವಿತ್ರ ಖುರ್‌ಆನ್ ಅಧ್ಯಾಯ 10 ವಚನ 100ರಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ: ಅಲ್ಲಾಹನು ಸರ್ವಶಕ್ತನಾಗಿರುವುದರಿಂದ ಅವನು ಇಚ್ಛಿಸಿದ್ದರೆ ಭೂಲೋಕದಲ್ಲಿರುವ ಎಲ್ಲರೂ ಮುಸ್ಲಿಮರಾಗುತ್ತಿದ್ದರು. ಆದರೆ ಅಲ್ಲಾಹನು ಮಾನವರನ್ನು ಅದಕ್ಕೋಸ್ಕರ ನಿರ್ಬಂಧಿಸಲಿಲ್ಲ. ಅಲ್ಲಾಹನು ಹಝ್ರತ್ ಪೈಗಂಬರರಿಗೆ(ಸ) ಉಪದೇಶಿಸಿದನು: ಇಸ್ಲಾಮಿನ ಸಂದೇಶವನ್ನು ಹರಡಲು ಬಲಪ್ರಯೋಗ ಮಾಡಬಾರದು. ಧರ್ಮವು ಪ್ರತಿಯೊಬ್ಬ ಮನುಷ್ಯನ ಹೃದಯ ಮತ್ತು ಮನಸ್ಸಾಕ್ಷಿಗೆ ಸಂಬಂಧಿಸಿದುದಾಗಿರುತ್ತದೆ.

ಆದುದರಿಂದ ಸ್ಪಷ್ಟವಾಗಿ ತಿಳಿಯುವುದೇನೆಂದರೆ, ಯಾವುದೇ ಸಂದರ್ಭದಲ್ಲಿ ಇಸ್ಲಾಮನ್ನು ಅಂಗೀಕರಿಸುವಂತೆ ಮಾಡಲು ಅಥವಾ ಬೇರೆ ಯಾವುದೇ ಧರ್ಮವನ್ನು ಅಂಗೀಕರಿಸುವಂತೆ ಮಾಡಲು ಬಲಪ್ರಯೋಗ ಮಾಡುವುದು ಎಂದೂ ಅನುಮತಿಸಲ್ಪಟ್ಟಿಲ್ಲ. ಆದರೆ ಮುಸ್ಲಿಮರು ಇಸ್ಲಾಮಿನ ಸಂದೇಶವನ್ನು ಪ್ರಚಾರಗೊಳಿಸಬೇಕೆಂದು ಆದೇಶಿಸಲಾಗಿದೆ. ಪವಿತ್ರ ಖುರ್‌ಆನ್ ಅಧ್ಯಾಯ 18 ವಚನ 30ರಲ್ಲಿ ಅಲ್ಲಾಹನು ಹಝ್ರತ್ ಪೈಗಂಬರರೊಂದಿಗೆ(ಸ) ಹೀಗೆ ಹೇಳಿದ್ದಾನೆ:

ಹೇಳು : ಇದು ನಿಮ್ಮ ಪ್ರಭುವಿನ ಕಡೆಯಿಂದ ಬಂದ ಸತ್ಯವಾಗಿದೆ. ಆದುದರಿಂದ ಯಾರು ಇಚ್ಛಿಸುತ್ತಾನೋ ಅವನು ನಂಬಲಿ. ಯಾರು ಇಚ್ಛಿಸುತ್ತಾನೋ ಅವನು ನಿರಾಕರಿಸಲಿ.

ಈ ವಚನ ಅತ್ಯಂತ ಸ್ಪಷ್ಟವಾಗಿದೆ. ನಂಬಲು ಮತ್ತು ನಂಬದಿರಲು ಎಲ್ಲ ಜನರಿಗೆ ಸ್ವಾತಂತ್ರ್ಯ ನೀಡಲಾಗಿದೆ. ಹಝ್ರತ್ ಪೈಗಂಬರರೊಂದಿಗೆ(ಸ) ಇಸ್ಲಾಮಿನ ಸಂದೇಶವನ್ನು ಮಾತ್ರ ಜನರಿಗೆ ತಲುಪಿಸಲು ಅನುಮತಿಸಲಾಗಿದೆ. ಹೀಗಿರುವಾಗ ಇಂದಿನ ಕಾಲದ ಮುಸ್ಲಿಮ್ ನಾಮಧಾರಿಗಳು ಇದಕ್ಕಿಂತ ಮುಂದೆ ಸಾಗಿ ತಮಗೆ ಇಸ್ಲಾಮಿನ ಪರಿಶುದ್ಧ ಪ್ರವಾದಿಗಿಂತ ಹೆಚ್ಚಿನ ಅಧಿಕಾರ ಇದೆ ಎಂದು ಚಿಂತಿಸುವುದಾದರೂ ಹೇಗೆ?

ನಾನು ಇಸ್ಲಾಮ್ ಧರ್ಮ ತತ್ವಗಳ ಸಾರಾಂಶವನ್ನೂ ಸಂಕ್ಷಿಪ್ತವಾಗಿ ಖುರ್‌ಆನ್‌ನಿನ ವಿವಿಧ ವಚನಗಳನ್ನೂ ಆಧಾರವಾಗಿಟ್ಟುಕೊಂಡು ವಿವರಿಸಿದ್ದೇನೆ. ಕೆಲವು ಮುಸ್ಲಿಮ್ ಗುಂಪುಗಳು ಮತ್ತು ಸರಕಾರಗಳು ನಡೆಸುವ ಕ್ರೂರ ಕೃತ್ಯಗಳು ಇಸ್ಲಾಮಿಗೆ ಸಂಪೂರ್ಣ ವಿರುದ್ಧವಾಗಿವೆ ಎಂದು ಮೇಲೆ ಉಲ್ಲೇಖಿಸಿದ ಪವಿತ್ರ ಖುರ್‌ಆನ್ ವಚನಗಳಿಂದ ಸಾಬೀತಾಗುತ್ತದೆ.

ನೀವು ಆಶ್ಚರ್ಯ ಪಡಬಹುದು. ಈ ಕೃತ್ಯಗಳು ಇಸ್ಲಾಮ್ ಧರ್ಮ ತತ್ವಗಳಿಗೆ ವಿರುದ್ಧವಾಗಿದ್ದರೆ ಈ ಜನರು ಹೀಗೆ ಕ್ರೂರ ಕೃತ್ಯಗಳನ್ನು ಏಕೆ ಮಾಡುತ್ತಾರೆ? ಇದಕ್ಕಿರುವ ಸರಳ

ಉತ್ತರ ನಾನು ಹಿಂದೆ ಹೇಳಿದ ಹಾಗೆ: ಅವರು ತಮ್ಮ ಲೌಕಿಕ ಹಿತಾಸಕ್ತಿಗಳನ್ನು ಈಡೇರಿಸಲು ಹೀಗೆ ಮಾಡುತ್ತಾರೆ. ಅವರು ಆಧ್ಯಾತ್ಮಿಕ ಅಥವಾ ಧಾರ್ಮಿಕ ಉದ್ದೇಶ ಲಕ್ಷ್ಯಗಳನ್ನು ಹೊಂದಿಲ್ಲ. ಅವರು ಧರ್ಮದ ನಾಮದಲ್ಲಿ ಕ್ರೂರಕೃತ್ಯಗಳನ್ನೂ ರಕ್ತಪಾತಗಳನ್ನೂ ಮಾಡಿ ಲೌಕಿಕ ಲಾಭಗಳನ್ನು ಪಡೆಯಲು ಪ್ರಯತ್ನಿಸುತ್ತಿದ್ದಾರೆ.

ನಾನು ಪುನಃ ಹೇಳುತ್ತೇನೆ: ಅಹ್ಮದೀ ಮುಸ್ಲಿಮರು ಮತ್ತು ಶಾಂತಿ ಪ್ರಿಯರಾದ ಮುಸ್ಲಿಮರು, ಈ ಜನರು ಇಸ್ಲಾಮ್ ಎಂಬ ಪವಿತ್ರ ಧರ್ಮಕ್ಕೆ, ಅನ್ಯಾಯದಿಂದ ಅದನ್ನು ದುರುಪಯೋಗಪಡಿಸಿ ಅದಕ್ಕೆ ಕಳಂಕ ಉಂಟುಮಾಡುವ ಬಗ್ಗೆ ಬಹಳ ನೋವನ್ನು ಅನುಭವಿಸುತ್ತಿದ್ದಾರೆ. ಭೀಕರವಾದಿ ಗುಂಪುಗಳು ನಡೆಸುವ ಕ್ರೂರ ಕೃತ್ಯಗಳನ್ನು ಆಧಾರವಾಗಿಟ್ಟುಕೊಂಡು ಇಸ್ಲಾಮ್ ಹಿಂಸಾತ್ಮಕ ಧರ್ಮವೆಂದು ಪ್ರತಿಪಾದಿಸುವ ಜನರನ್ನೂ ಸಂಘಟನೆಗಳನ್ನೂ ರಾಜಕಾರಣಿಗಳನ್ನೂ ನಾನು ಪ್ರಶ್ನಿಸಲು ಬಯಸುತ್ತೇನೆ. ನಾನು ಅವರೊಂದಿಗೆ ಕೇಳಲು ಬಯಸುತ್ತೇನೆ. ಈ ಭೀಕರವಾದಿ ಗುಂಪುಗಳು ತಮ್ಮ ಭೀಕರ ಚಟುವಟಿಕೆಗಳನ್ನು ಮತ್ತು ಹೋರಾಟಗಳನ್ನು ಇಷ್ಟು ದೀರ್ಘಕಾಲ ಮುಂದುವರಿಸುತ್ತಾ ಹೋಗಲು ಅವರಿಗೆ ಸಂಪತ್ತು ಗಳಿಸಲು ಸಾಧ್ಯವಾದದ್ದು ಹೇಗೆ? ಅವರಿಗೆ ಆಧುನಿಕ ಶಸ್ತ್ರಗಳು ಲಭಿಸಿದ್ದು ಹೇಗೆ? ಅವರಿಗೆ ಶಸ್ತ್ರ ನಿರ್ಮಾಣ ಕಾರ್ಖಾನೆಗಳು ಇವೆಯೋ? ಈ ಜನರು ಕೆಲವು ಶಕ್ತಿ ರಾಷ್ಟ್ರಗಳಿಂದ ನೆರವು ಪಡೆಯುತ್ತಿದ್ದಾರೆ ಎಂಬುದು ಸುಲಭ ಗ್ರಾಹ್ಯವಾದ ವಿಷಯವಾಗಿದೆ. ತೈಲ ಸಮೃದ್ಧವಾದ ಮುಸ್ಲಿಮ್ ದೇಶಗಳು ನೇರವಾಗಿ ಸಹಾಯ ನೀಡುತ್ತಿರಬಹುದು ಅಥವಾ ಬೇರೆ ಮಹಾಶಕ್ತಿಗಳು ರಹಸ್ಯವಾಗಿ ಬೆಂಬಲ ನೀಡುತ್ತಿರಬಹುದು.

ಐಸಿಸ್ ಮೊದಲ ಬಾರಿ ಪ್ರಸಿದ್ಧಿ ಗಳಿಸಿದಾಗ ಅದರ ಬಗ್ಗೆ ಅವರು ದೇಶದ ಸೈನಿಕರ ಆಯುಧಗಳನ್ನು ವಶಪಡಿಸಿಕೊಂಡರು ಮತ್ತು ಕೆಲವು ಶಸ್ತ್ರಾಗಾರಗಳನ್ನು ಸ್ವಾಧೀನಪಡಿಸಿಕೊಂಡರೆಂದು ಹೇಳಲಾಗಿತ್ತು. ಇದು ಸತ್ಯವಾಗಿರಲೂಬಹುದು. ಆದರೆ ಇವು ಮಾತ್ರ ಅವರಿಗೆ ತಮ್ಮ ಕೃತ್ಯಗಳನ್ನು ಈಗಿನ ತನಕ ಮುಂದುವರಿಸಲು ಸಾಕಾಗಲಾರದು. ಒಂದು ಕ್ರಮಬದ್ಧ ಸೈನ್ಯಕ್ಕೆ ಪೂರೈಕೆ ಕಡಿಯಲ್ಪಟ್ಟರೆ ಅವರಿಗೆ ಯುದ್ಧ ಮುಂದುವರಿಸಲು ಅಸಾಧ್ಯವಾಗುತ್ತದೆ. ಆದರೆ ಐಸಿಸ್ ಭೀಕರರ ಪೂರೈಕೆ ಶೃಂಖಲೆ ವರ್ಧಿಸುತ್ತಾ ಇರುವುದಾಗಿ ಕಾಣಿಸುತ್ತದೆ. ಅವರ ಬಳಿ ಈಗ ವಿಮಾನ ಧ್ವಂಸಕ ಕ್ಷಿಪಣಿಗಳಿವೆ ಮತ್ತು ಇತರ ಆಧುನಿಕ ಶಸ್ತ್ರಗಳಿವೆ ಎಂದು ಹೇಳಲಾಗುತ್ತದೆ. ಇವೆಲ್ಲ ಅವರಿಗೆ ಪೂರೈಕೆ ಶೃಂಖಲೆ ಜಾರಿಯಲ್ಲಿದೆ ಎಂದು ಸ್ಪಷ್ಟಪಡಿಸುತ್ತದೆ.

ಈ ಭೀಕರ ಸಂಘಟನೆಯ ವಶದಲ್ಲಿ ಮಿಲಿಯಗಟ್ಟಲೆ ಡಾಲರ್ ಸಂಪತ್ತಿದೆ ಎಂದು ತಿಳಿದು ಬಂದಿದೆ. ಇದರಿಂದ ಅವರಿಗಿರುವ ಬಾಹ್ಯ ಬೆಂಬಲದ ಬಗ್ಗೆ ಸ್ಪಷ್ಟವಾಗುತ್ತದೆ. ಅನೇಕ ಅಧಿಕಾರಿಗಳು, ವಿಮರ್ಶಕರು, ಬಹಿರಂಗವಾಗಿ ಈ ಬಗ್ಗೆ ಅಭಿಪ್ರಾಯ ಸೂಚಿಸಿದ್ದಾರೆ.

ಉದಾಹರಣೆಗೆ, ಯು.ಎಸ್.ಎ. ಸರಕಾರದ ಹಿರಿಯ ಪ್ರತಿನಿಧಿ ಡೇವಿಡ್ ಕೋಹೆನ್ (ಅಂಡರ್ ಸೆಕ್ರಿಟರಿ ಫೋರ್ ಟೆರರಿಸಮ್ ಎಂಡ್ ಫೈನಾನ್ಸಿಯಲ್ ಇಂಟೆಲಿಜೆನ್ಸ್) ಹೀಗೆ ಹೇಳಿದ್ದಾರೆ: ಐಸಿಸ್ ನಾವು ಎದುರಿಸುತ್ತಿರುವ ಅತ್ಯಂತ ಹೆಚ್ಚು ಸಂಪತ್ತನ್ನು ಹೊಂದಿದ ಭೀಕರ ಸಂಘಟನೆಯಾಗಿದೆ. ಅವರು ಪ್ರತಿ ತಿಂಗಳು ಮಿಲಿಯಗಟ್ಟಲೆ ಡಾಲರ್ ಖರ್ಚುಮಾಡುತ್ತಾರೆ ಮತ್ತು ಪ್ರತಿದಿನ ಒಂದು ಮಿಲಿಯ ಡಾಲರ್ ಬೆಲೆಯ ತೈಲವನ್ನು ಕಾಳಸಂತೆಯಲ್ಲಿ ವಿಕ್ರಯಿಸುತ್ತಾರೆ.

ಅವರು ಇಷ್ಟು ಬೃಹತ್ ಗಾತ್ರದ ತೈಲವನ್ನು ಯಾವುದೇ ತಡೆಯಿಲ್ಲದೆ ಎಲ್ಲಿಂದ ಹೇಗೆ ಗಳಿಸುತ್ತಾರೆಂದು ನಾವು ಕೇಳಲು ಬಯಸುತ್ತೇವೆ. ಲೋಕದ ಬೇರೆ ಪ್ರದೇಶಗಳಲ್ಲಿ ತೈಲ ಸಾಗಣೆ ಮತ್ತು ಮಾರಾಟವನ್ನು ವೀಕ್ಷಣೆಗೆ ಒಳಪಡಿಸಲಾಗುತ್ತಿದೆ. ಕೆಲವು ತೈಲ ಸಮೃದ್ಧ ದೇಶಗಳ ವಿರುದ್ಧ ಪ್ರತಿಬಂಧಗಳನ್ನು ಹೇರಲಾಗಿದೆ. ಆದರೆ ಐಸಿಸ್ ಎಲ್ಲ ರೀತಿಯ ನಿಯಮಗಳನ್ನು ಕಡೆಗಣಿಸಿ ತೈಲವನ್ನು ಪಡೆಯಲು ಮತ್ತು ಮಾರಾಟಮಾಡಲು ಶಕ್ತವಾಗಿದೆ. ಇಷ್ಟು ಬೃಹತ್ ಗಾತ್ರದ ತೈಲವನ್ನು ಸಾಗಾಟ ಮಾಡುವುದು ಮತ್ತು ಮಾರಾಟ ಮಾಡುವುದನ್ನು ಸುಲಭವಾಗಿ ಅಡಗಿಸಿಡಲು ಸಾಧ್ಯವಿಲ್ಲವೆಂದು ನಮಗೆಲ್ಲರಿಗೂ ತಿಳಿದಿದೆ. ಐಸಿಸ್ ಒತ್ತೆಯಾಳು ಬಿಡುಗಡೆಗೆ ಪರಿಹಾರಕ್ಕಾಗಿ ಹಣ ಪಡೆಯುತ್ತಾ ಇರುತ್ತದೆ ಎಂದು ಹೇಳಲಾಗುತ್ತಿದೆ. ಆದರೆ ಅದಕ್ಕೆ ದೊರಕಿರುವ ಇತರ ಸಂಪನ್ಮೂಲಗಳಿಗೆ ಹೋಲಿಸಿದರೆ ಇದು ಚಿಕ್ಕದಾಗಿದೆ.

ಈ ಭೀಕರ ಗುಂಪುಗಳು ನೀಡುತ್ತಿರುವ ಧನ ಸಹಾಯ ಬಹಳ ಮುಖ್ಯ ಸಮಸ್ಯೆಯಾಗಿದೆ. ಅವರು ಧನ ಸಹಾಯ ನೀಡಿ ದುರ್ಬಲ ಗುಂಪುಗಳನ್ನೂ ವ್ಯಕ್ತಿಗಳನ್ನೂ ಹಿಡಿಗೂಡಲು ಸಮರ್ಥರಾಗುತ್ತಿದ್ದಾರೆ. ಇತ್ತೀಚೆಗಿನ ಒಂದು ವರದಿ ಹೀಗೆ ಹೇಳುತ್ತಿದೆ: ಒಂದು ಕುಟುಂಬ ಒಬ್ಬ ಸದಸ್ಯನನ್ನು ಐಸಿಸ್ ಸೇರಲು ಕಳುಹಿಸಿದರೆ ಆ ಕುಟುಂಬಕ್ಕೆ ಸಾವಿರಗಟ್ಟಲೆ ಡಾಲರ್ ಮೊದಲ ಕಂತಾಗಿ ನೀಡಲಾಗುತ್ತದೆ. ಅನಂತರ ನೂರುಗಟ್ಟಲೆ ಡಾಲರ್ ಕ್ರಮಬದ್ಧವಾಗಿ ನೀಡಲಾಗುತ್ತಿದೆ.

ಈ ಗುಂಪುಗಳಿಗೆ ಧನವನ್ನು ಒದಗಿಸುವುದನ್ನು ತಡೆಯಲು ತುರ್ತಾಗಿ ಏನನ್ನಾದರೂ ಮಾಡಬೇಕಾಗಿದೆ. ಭೀಕರವಾದಿಗಳ ಹೋರಾಟ ತಮ್ಮನ್ನೂ ಬಾಧಿಸುವುದೆಂದು ಪಶ್ಚಿಮ ದೇಶಗಳು ಈಗ ಮನವರಿಕೆ ಮಾಡಿಕೊಂಡಿವೆ. ಆದರೆ ಇದು ಸಹ ಸರಿಯಾದ ಅಂದಾಜು ಅಲ್ಲ. ವಾಸ್ತವದಲ್ಲಿ ಭೀಕರವಾದಿಗಳ ಹೋರಾಟ ಇಡೀ ಲೋಕದ ವಿರುದ್ಧವಾಗಿದೆ.

ಮಹಾಶಕ್ತಿಗಳು ಮುಸ್ಲಿಮ್ ದೇಶಗಳ ಧೋರಣೆಗಳ ಮೇಲೆ ಬಹಳ ಪ್ರಭಾವಬೀರುತ್ತವೆ ಮತ್ತು ಕೆಲವು ಸಾರಿ ಆದೇಶ ನೀಡುತ್ತವೆ ಎಂದು ನಾವು ಕಾಣುತ್ತೇವೆ. ಈಗ ಪ್ರಶ್ನೆ ಏನೆಂದರೆ, ನಿಜವಾಗಿಯೂ ಅವಶ್ಯಕವಾದ ಈ ವಿಷಯಗಳಲ್ಲಿ ತಮ್ಮ ಪ್ರಭಾವವನ್ನು ಈ ಮಹಾಶಕ್ತಿಗಳು ಏಕೆ ಬೀರುತ್ತಾ ಇಲ್ಲ?

ಎಲ್ಲ ವಿಧ ಭೀಕರ ಕೃತ್ಯಗಳನ್ನು ತಡೆಯಲು ಒಗ್ಗೂಡಿದ ಮತ್ತು ಸಂಘಟಿತ ಪ್ರಯತ್ನ ಏಕೆ

ಮಾಡುವುದಿಲ್ಲ? ಈ ಗುಂಪು ಮಾಡಬಹುದಾಗ ವಿನಾಶಕ್ಕೆ ಹೋಲಿಸಿದರೆ ಅದನ್ನು ತಡೆಗಟ್ಟಲು ಈಗ ಮಾಡಲಾಗುತ್ತಿರುವ ಪ್ರಯತ್ನಗಳು ಬಹಳ ಕಡಿಮೆಯಾಗಿವೆ. ನನ್ನ ಅಭಿಪ್ರಾಯ ಪ್ರಕಾರ, ಈಗ ಸಂಭವಿಸುತ್ತಿರುವುದು ಕೇವಲ ಮುಸ್ಲಿಮ್ ಲೋಕ ಮಾಡಿದ ತಪ್ಪುಗಳಿಂದ ಮಾತ್ರವಲ್ಲ, ಬಾಹ್ಯ ಶಕ್ತಿಗಳು ಸಹ ಈ ವಿನಾಶಕರ ಪರಿಸ್ಥಿತಿ ಉಂಟುಮಾಡಲು ಸಹಾಯ ಮಾಡುತ್ತಿವೆ.

ಸಿರಿಯಾ, ಇರಾಖ್ ಮೊದಲಾದ ದೇಶಗಳಲ್ಲಿ ಆಂತರಿಕ ಸಂಘರ್ಷಗಳು ಅನೇಕ ವರ್ಷಗಳಿಂದ ಜಾರಿಯಲ್ಲಿವೆ. ಬಾಹ್ಯ ಶಕ್ತಿಗಳು ವಿದ್ರೋಹಿ ಗುಂಪುಗಳಿಗೆ ಮತ್ತು ಪಂಗಡಗಳಿಗೆ ಧನ ಮತ್ತು ಆಯುಧಗಳ ಸಹಾಯ ನೀಡುತ್ತಾ ಇದ್ದುವು. ಆದರೆ ಈ ವಿದ್ರೋಹಿ ಗುಂಪುಗಳು ಅವರಿಗೆ ಧನಸಹಾಯ ನೀಡುತ್ತಿದ್ದವರ ನಿಯಂತ್ರಣದಿಂದ ವೇಗವಾಗಿ ದೂರಸರಿದು ಹೋಗಿವೆ. ಅವರು ಭೀಕರವಾದಿ ಸಿದ್ಧಾಂತಗಳನ್ನು ಆಧಾರವಾಗಿಟ್ಟುಕೊಂಡು ವಿನಾಶಕರ ಕೃತ್ಯಗಳನ್ನು ಮಾಡುತ್ತಿದ್ದಾರೆ. ನಾನು ಹೇಳುತ್ತಿರುವುದು ಸಂಪರ್ಕ ಮಾಧ್ಯಮಗಳು ಬಹಿರಂಗಪಡಿಸಿರುವುವುಗಳಿಗೆ ಮತ್ತು ಸಾರ್ವತ್ರಿಕವಾಗಿ ತಿಳಿದು ಬಂದುದಕ್ಕೆ ವಿರುದ್ಧವಾಗಿ ಏನೂ ಅಲ್ಲ. ಐಸಿಸ್ ಮೊದಲಾದ ಗುಂಪುಗಳು ಇಂತಹ ಧೋರಣೆಗಳ ಫಲ ಸ್ವರೂಪಗಳಾಗಿವೆ. ಅವರು ತಮ್ಮ ಭಯೋತ್ಪಾದಕ ಕಾರ್ಯಕ್ಷೇತ್ರವನ್ನು ದೂರದೂರದವರೆಗೆ ಹರಡಿಕೊಂಡು ಇಡೀ ಲೋಕದ ಮೇಲೆ ದುಷ್ಪರಿಣಾಮಗಳನ್ನು ಬೀರುತ್ತಿದ್ದಾರೆ.

ಈ ಭೀಕರ ಕೃತ್ಯಗಳು ಇಸ್ಲಾಮ್‌ನೊಂದಿಗೆ ಸಂಬಂಧಿಸಿವೆ ಎಂದು ಆಪಾದಿಸುವುದು ನನಗೆ ಬಹಳ ನೋವನ್ನುಂಟುಮಾಡುವ ವಿಷಯವಾಗಿದೆ ಎಂದು ನಾನು ಪುನಃ ಹೇಳಲು ಬಯಸುತ್ತೇನೆ. ಇಂದಿನ ಕಾಲದಲ್ಲಿ ಪಶ್ಚಿಮದ ದೇಶಗಳಿಂದ ಮುಸ್ಲಿಮ್ ಯುವ ಜನರು ಸಿರಿಯಾ ಮತ್ತು ಇರಾಖ್‌ಗೆ ಹೋಗಿ ತೀವ್ರವಾದಿಗಳಾಗುವುದು ಅತ್ಯಂತ ಆತಂಕಜನಕವಾಗಿದೆ. ಈ ಯುವ ಜನರು ತಮ್ಮ ವಾಸದ ದೇಶಗಳಿಗೆ ಮರಳಿಬಂದು ಆಕ್ರಮಣ ಮಾಡುವುದು ಮತ್ತು ಲೋಕದ ಈ ಭಾಗದಲ್ಲಿ ಅಸ್ತವ್ಯಸ್ತತೆ ಸೃಷ್ಟಿಸುವುದು ಸಂಭವನೀಯವಾಗಿದೆ. ಆದುದರಿಂದ ಇದೊಂದು ಸ್ಥಳೀಯ ಅಥವಾ ಮುಸ್ಲಿಮ್ ಸಮಸ್ಯೆ ಅಲ್ಲ; ಇದು ಜಾಗತಿಕವಾದ ಒಂದು ಸಮಸ್ಯೆಯಾಗಿದೆ. ಈ ಭೀಕರವಾದಿ ಸಂಘಟನೆಗಳನ್ನು ತಡೆಯಲು ಜಾಗತಿಕ ಪ್ರಬಲ ಪ್ರಯತ್ನ ಮಾಡುವ ಅವಶ್ಯಕತೆ ಇದೆ.

ಕೆಲವು ಪ್ರಸಿದ್ಧ ವ್ಯಕ್ತಿಗಳು ಭೀಕರವಾದ ವಿರುದ್ಧ ಯುದ್ಧ ಕೊನೆಗೊಳ್ಳಲು ಮೂವತ್ತು ಅಥವಾ ನೂರು ವರ್ಷಗಳು ಬೇಕಾಗಬಹುದೆಂದು ಹೇಳಿದ್ದಾರೆ. ಆದರೆ ನಾನು ನಂಬುವುದೇನೆಂದರೆ, ಲೋಕವು ಈ ಭೀಕರ ಗುಂಪುಗಳನ್ನು ನಿರ್ಮೂಲ ಮಾಡಲು ದೃಢನಿರ್ಧಾರ ಮಾಡಿದರೆ ಬಹಳ ಕಡಿಮೆ ಕಾಲಾವಧಿಯಲ್ಲಿ ಈ ನಿರ್ಧಾರವನ್ನು ಈಡೇರಿಸಬಹುದು. ಈ ಹೋರಾಟ ಕೊನೆಗೊಳ್ಳಲು ದಶಕಗಳು ಬೇಕಾಗಿವೆ ಎಂದು ಹೇಳಿ ನಾವು ನಮ್ಮ ವೈಯಕ್ತಿಕ

ಹೊಣೆಗಾರಿಕೆಗಳಿಂದ ಮುಕ್ತರಾಗಿದ್ದೇವೆ ಎಂದು ಯೋಚಿಸಬಾರದು. ಜಾಗತಿಕ ಭೀಕರತೆಯನ್ನು ಎದುರಿಸುವ ಪ್ರಯತ್ನದಲ್ಲಿ ಪ್ರತಿಯೊಬ್ಬನು ಭಾಗವಹಿಸಬೇಕು. ಇಸ್ಲಾಮಿನ ವಿರುದ್ಧ ಅಥವಾ ನಿರ್ದಿಷ್ಟ ಗುಂಪಿನ ವಿರುದ್ಧ ದೋಷಾರೋಪ ಮಾಡುವುದು ನಮ್ಮನ್ನು ಯುದ್ಧದಿಂದಾಗಲೀ ನಮ್ಮ ಹೊಣೆಗಾರಿಕೆಗಳಿಂದಾಗಲೀ ಸ್ವತಂತ್ರರನ್ನಾಗಿ ಮಾಡಲಾರದು.

ಆದುದರಿಂದ ಎಲ್ಲ ಶಾಂತಿಪ್ರಿಯ ಜನರು ತಮ್ಮ ಸರಕಾರಗಳ ಮೇಲೆ ಒತ್ತಡ ಹೇರಬೇಕು. ಎಲ್ಲ ರಾಜಕಾರಣಿಗಳೂ ಪ್ರಭಾವಶಾಲಿಗಳಾದ ಜನರೂ ಇದರ ಬಗ್ಗೆ ಚಿಂತಿಸಬೇಕು ಮತ್ತು ತಮ್ಮ ಕ್ಷೇತ್ರಗಳಲ್ಲಿ ಸತ್ಯವಾಗಿಯೂ ನ್ಯಾಯಪಾಲನೆ ಮಾಡಬೇಕು. ಲೋಕಶಾಂತಿ ಕೆಡಿಸುವ ಚಟುವಟಿಕೆಗಳನ್ನು ಸಂಪೂರ್ಣವಾಗಿ ತಡೆಯಲು ದೃಢನಿಶ್ಚಯದ ಕ್ರಮಗಳನ್ನು ಕೈಗೊಳ್ಳಬೇಕು. ನಾವು ಲೋಕವನ್ನು ರಕ್ಷಿಸಲು ಬಯಸುವೆವಾದರೆ, ಸತ್ಯವಾಗಿಯೂ ಸಮಾಜದ ಎಲ್ಲ ಹಂತಗಳಲ್ಲೂ ನ್ಯಾಯಪಾಲನೆ ಮಾಡಬೇಕು. ಪ್ರತಿಯೊಂದು ದೇಶದಲ್ಲಿ ತಲೆದೋರುವ ಸಮಸ್ಯೆಗಳನ್ನು ನ್ಯಾಯಬದ್ಧವಾಗಿ ಪರಿಹರಿಸಬೇಕು ಮತ್ತು ನಿರಾಶೆ ತಲೆದೋರದಂತೆ ಜಾಗರೂಕರಾಗಬೇಕು.

ಯಾವುದೇ ದೇಶದ ಸಂಪತ್ತನ್ನು ಅಸೂಯೆಯಿಂದ ನೋಡಬಾರದು. ಪರಸ್ಪರ ಸಹಾಯ ಮಾಡುವ ಧೋರಣೆಯನ್ನು ಎಲ್ಲರೂ ಹೊಂದಬೇಕು. ಅತ್ಯಂತ ಮುಖ್ಯ ವಿಷಯವೇನೆಂದರೆ, ಲೋಕವು ಅದರ ಸೃಷ್ಟಿಕರ್ತನನ್ನು ಮರೆತಿದೆ ಎಂಬುದನ್ನು ತಿಳಿದುಕೊಳ್ಳಬೇಕು ಮತ್ತು ಅವನ ಕಡೆಗೆ ಮರಳಬೇಕು.

ಹೀಗೆ ಸಂಭವಿಸುವಾಗ ಮಾತ್ರ ನಿಜವಾದ ಶಾಂತಿ ಲೋಕದಲ್ಲಿ ಸ್ಥಾಪಿತವಾಗುವುದು. ಹೀಗೆ ಆಗದಿದ್ದರೆ, ಜಾಗತಿಕ ಶಾಂತಿಯ ಬಗ್ಗೆ ಯಾವ ಖಾತರಿಯನ್ನೂ ನೀಡಲು ಸಾಧ್ಯವಾಗದು.

ನಾನು ಇದರ ಮೊದಲು ಅನೇಕ ಸಲ ಇನ್ನೊಂದು ಜಾಗತಿಕ ಯುದ್ಧದ ಭಯಾನಕ ಪರಿಣಾಮಗಳ ಬಗ್ಗೆ ಪ್ರಸ್ತಾಪಿಸಿದ್ದೇನೆ. ಪ್ರಾಯಶಃ ಇಂತಹ ಜಾಗತಿಕ ಮಹಾಯುದ್ಧ ಸಂಭವಿಸಿದ ನಂತರ ಮಾತ್ರ ಲೋಕವು ವೈಯಕ್ತಿಕ ಹಂಬಲಗಳನ್ನು ಮತ್ತು ಸ್ವಾರ್ಥ ಹಿತಾಸಕ್ತಿಗಳನ್ನು ಈಡೇರಿಸಲು ರೂಪಿಸಲಾಗುವ ಅನ್ಯಾಯ ಭರಿತ ಧೋರಣೆಗಳ ವಿನಾಶಕಾರಿ ಪರಿಣಾಮಗಳನ್ನು ಅರಿತುಕೊಳ್ಳುವುದೆಂದು ತೋರುತ್ತದೆ. ಅಂತಹ ವಿನಾಶ ಸಂಭವಿಸುವ ಮೊದಲು ಲೋಕವು ಅದರ ಬಗ್ಗೆ ಪ್ರಜ್ಞೆ ಹೊಂದುವುದೆಂದು ನಾನು ಪ್ರತೀಕ್ಷಿಸುತ್ತೇನೆ ಮತ್ತು ಪ್ರಾರ್ಥಿಸುತ್ತೇನೆ.

ಲೋಕವು ತನ್ನ ಸೃಷ್ಟಿಕರ್ತನನ್ನು ಗುರುತಿಸಿ ಅಂಗೀಕರಿಸಲಿ ಎಂದು ನಾನು ಪ್ರತೀಕ್ಷಿಸುತ್ತೇನೆ ಮತ್ತು ಪ್ರಾರ್ಥಿಸುತ್ತೇನೆ. ಈ ಮಾತುಗಳೊಂದಿಗೆ ನಾನು ಮುಕ್ತಾಯಗೊಳಿಸುತ್ತೇನೆ. ನಿಮಗೆ ಬಹಳ ಧನ್ಯವಾದಗಳು.

# ಇಸ್ಲಾಮ್ - ಶಾಂತಿಯ ಧರ್ಮ

ಪ್ರಾಮಾಣಿಕತೆ

ಸ್ವಾತಂತ್ರ್ಯ

ಶಾಂತಿ

ಗೌರವ

ಸಮಾನತೆ

© Islam International Publications Ltd.

Published in India in 2018, copies: 2000
Published by: Nazarat Nashr-o-Isha'at,
Sadr Anjuman Ahmadiyya Qadian.143516-Punjab,India
Printed in India @ Fazl-e-Umar Printing Press Qadian.

For further information please Visit:
www.alislam.org / www.ahmadiyyamuslimjamaat.in / www.mta.tv
Feedback www.ahmadiyyamuslimjamaat.in/feedback
Noorul Islam Toll Free Number: 1800-3010-2131

/islaminind /islaminind /+islaminindia /islaminindia /c/islaminindia

**official blog: www.lightofislam.in**

Muslim Television Ahmadiyya International

Satellite: Asia sat 7s, Degree: 105.5 East, Frequency 3760 Symbol Rate: 26000 FEC: Auto / C.Band 4 Feet Dish Antenna
EutelsatE70B,Degree:70° East,Frequency:11211,SymbolRate:5111,Polarization-HorizontalQPSK-1/2,KU Band 2 feet Dish Antenna